# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.

ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ

55,000 Plus readers



Place Your Ads
Reach New Audience

9448633038
hampitimes@gmail.com  Valmiki Circle, Hosapete-583201



| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:298 | ನೋಂದಣಿ ನಂ.:KARKAN27911 | ವಿಜಯನಗರ | 26.04.2024 | ಶುಕ್ರವಾರ | ಪುಟ:04 | ಬೆಲೆ:2 |
| Volume:01 | Issue:298 | Reg.No:KARKAN27911 | VIJAYANAGARA | 26.04.2024 | Friday | Page:04 | Rs:2 |



**NATIONAL PU COLLEGE**

HARIHAR ROAD, HOSAPETE-583203, Phone: 08394-230445

*Congratulations to all Who made us proud*

SCHOLARSHIP UPTO 30,000 /-
FOR MERITORIOUS STUDENTS

SCIENCE Distinctions:60 FirstClass:61

Consistent & quality results since 16 years in both Science & Commerce

THE ONLY COLLEGE IN HOSAPETE TO SECURE MORE NUMBER OF DISTINCTIONS

The trustworthy team of pcmb lecturers led by R. Shashidhar has been effectively managing the academic progress of National PU College since June 2009.

Bus facility from Hospet city, M M Halli, Huligi & Munirabad, HAMPI, KAMALAPURA

M: 94481 73436, 94499 80200



MEDHA S R V
585/600- 97.50%



CHINMAYEE B L
583/600- 97.20%



CHINMAYI SALMATH
581/600- 96.80%


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


MASSEY FERGUSON  TAFE

ವಿಜಯಶ್ರೀ ಮೋಟಾರ್ಸ್
(ಟ್ರ್ಯಾಕ್ಟರ್ ವಿಭಾಗ)

RRR GROUP



99801 27607
73533 06719



**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**

ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ,
ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com


## ನೀರಿನ ಪೈಪಲೈನ್‌ಗೆ ಧಕ್ಕೆಯಾಗದೆ ಸಿವಿಲ್ ಕಾಮಗಾರಿಗಳನ್ನು ನಡೆಸಿ

### ಜಿ.ಪಂ.ಸಿಇಒ ಸದಾಶಿವ ಪ್ರಭು ಅನುಷ್ಠಾನ ಇಲಾಖಾಧಿಕಾರಿಗಳಿಗೆ ಖಡಕ್ ಸೂಚನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಪೈಪ್‌ಲೈನ್‌ಗಳನ್ನು ಅಳವಡಿಸಲಾಗಿರುತ್ತದೆ. ಪೈಪ್‌ಲೈನ್ ಇರುವುದನ್ನು ಗುರುತಿಸಿ ಅವು ಹಾಳಾಗದಂತೆ ಸಿವಿಲ್ ಕಾಮಗಾರಿಗಳನ್ನು ನಡೆಸಬೇಕು ಎಂದು ಜಿಲ್ಲಾ ಪಂಚಾಯತಿ ಸಿಇಒ ಸದಾಶಿವ ಪ್ರಭು ಬಿ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ, ಕೆಆರ್‌ಐಡಿಎಲ್, ಪಿಡಬ್ಲ್ಯೂಡಿ, ಕರ್ನಾಟಕ ರಾಜ್ಯ ಹ್ಯಾಬಿಟೇಷನ್ ಸೆಂಟರ್, ನಿರ್ಮಿತಿ ಕೇಂದ್ರ, ಜೆಸ್ಕಾಂ ಮತ್ತು ಬಿಎಸ್‌ಎನ್‌ಎಲ್ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಏಪ್ರಿಲ್ 25ರಂದು ನಡೆಸಿದ ವಿಡಿಯೋ ಸಂವಾದ ಸಭೆಯಲ್ಲಿ ಮಾತನಾಡಿದರು.

ಕುಡಿಯುವ ನೀರಿನ ಪೈಪ್‌ಲೈನ್ ಮತ್ತು ಜಲಜೀವನ್ ಮಿಷನ್ ಯೋಜನೆಯಡಿ ಪೈಲ್‌ಲೈನ್‌ಗಳು ಅನುಷ್ಠಾನ ಇಲಾಖೆಗಳ ಕಾಮಗಾರಿ ಸಂದರ್ಭದಲ್ಲಿ ಹಾಳಾಗಿರುವ ಬಗ್ಗೆ ಜಿಲ್ಲೆಯ ಅನೇಕ ಪಂಚಾಯಿತಿಗಳಿಂದ ದೂರುಗಳು ಬರುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವ ಮುಂಚಿತವಾಗಿ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಲಿಖಿತವಾಗಿ ಸಂಪರ್ಕಿಸಿ ಕಾಮಗಾರಿ ಅನುಷ್ಠಾನ ಸ್ಥಳದಲ್ಲಿ ಕಂಟ್ರೋಲ್ ವಾಲ್ವಗಳು ಇಲ್ಲದಿರುವ ಬಗ್ಗೆ ಖಚಿತ ಮಾಹಿತಿ ಪಡೆದು ಕಾಮಗಾರಿಗಳನ್ನು ಮುಂಜಾಗ್ರತೆಯಿಂದ ಅನುಷ್ಠಾನಗೊಳಿಸಬೇಕು. ಒಂದು ವೇಳೆ ಕಾಮಗಾರಿಗಳ ಸಲುವಾಗಿ ಅವುಗಳನ್ನು ಸ್ಥಳಾಂತರ ಗೊಳಿಸಬೇಕಿದ್ದಲ್ಲಿ ಸೂಕ್ತ ವೆಚ್ಚಭರಿಸಿ ಸ್ಥಳಾಂತರಗೊಳಿಸಬೇಕು. ಈ ಬಗ್ಗೆ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಲು ಸೂಚಿಸಿ ಈ ಬಗ್ಗೆ ಗುತ್ತಿಗೆದಾರರಿಗೆ ಸೂಕ್ತ ಸಲಹೆ ಮತ್ತು ಆದೇಶಗಳನ್ನು ನೀಡಿ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಮನ್ವಯದೊಂದಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಬಿಎಸ್‌ಎನ್‌ಎಲ್ ಅಧಿಕಾರಿಗಳು, ಗ್ರಾಮೀಣ ಪ್ರದೇಶದಲ್ಲಿ ಬಿಎಸ್‌ಎನ್‌ಎಲ್ ಕೇಬಲ್‌ಗಳು ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ತುಂಬಾ ಹಾಳಾಗಿ ಗ್ರಾಮೀಣ ಪ್ರದೇಶದಲ್ಲಿ ಇಂಟರ್‌ನೆಟ್ ಸಂಪರ್ಕ ಮತ್ತಿತರ ಸಂವಹನ ಕಾರ್ಯಕ್ಕೆ ಅಡಚಣೆಯಾಗುತ್ತಿರುವ ಬಗ್ಗೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಗಳ ಗಮನಕ್ಕೆ ತಂದರು. ಈ ಬಗ್ಗೆ ಇಲಾಖೆಯೊಂದಿಗೆ ಸಮನ್ವಯ ಮಾಡಿಕೊಂಡು ಕಾಮಗಾರಿಗಳ ಅನುಷ್ಠಾನಕ್ಕೆ ಸಿಇಓ ಅವರು ಸೂಚನೆ ನೀಡಿದರು.

ಎಲ್ಲಾ ಅನುಷ್ಠಾನ ಇಲಾಖೆಗಳ ಕಾರ್ಯಪಾಲಕ ಅಭಿಯಂತರರು, ಯೋಜನಾ ನಿರ್ದೇಶಕರು, ಸಹಾಯಕ ಕಾರ್ಯ ಪಾಲಕ ಅಭಿಯಂತರರು ಮತ್ತು ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ತಾಲೂಕು ಹಂತದ ಅಧಿಕಾರಿಗಳು ಸಹ ವಿಡಿಯೋ ಸಂವಾದದ ಮೂಲಕ ಹಾಜರಿದ್ದರು.

## ಬಳ್ಳಾರಿ ಲೋಕಸಭಾ ಚುನಾವಣೆ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ (ಪ.ಪಂ) ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಬಳ್ಳಾರಿ ಲೋಕಸಭೆ ಮತಕ್ಷೇತ್ರಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಚುನಾವಣಾ ಆಯೋಗದ ನಿಯಮಗಳ ಅನ್ವಯ ಚಿಹ್ನೆ ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

| ಅಭ್ಯರ್ಥಿ | ಪಕ್ಷ | ಚಿಹ್ನೆ |
|---|---|---|
| ಈ.ತುಕಾರಾಮ್ | ಕಾಂಗ್ರೆಸ್ | ಕೈ |
| ವಾಲ್ಮೀಕಿ ಕೃಷ್ಣಪ್ಪ | ಬಹುಜನ ಸಮಾಜ ಪಾರ್ಟಿ | ಆನೆ |
| ಬಿ.ಶ್ರೀರಾಮುಲು | ಬಿಜೆಪಿ | ಕಮಲ |
| ಸಿ.ಚನ್ನವೀರ | ಕರ್ನಾಟಕ ರಾಷ್ಟ್ರ ಸಮಿತಿ | ಬ್ಯಾಟರಿ ಟಾರ್ಚ್ |
| ಎ.ದೇವದಾಸ್ | ಕಮ್ಯುನಿಷ್ಟ್ | ಆಟೋ ರಿಕ್ಷಾ |
| ಮಂಜುನಾಥ ಗೋಸಲ | ಪ್ರಹರ್ ಜನಶಕ್ತಿ ಪಾರ್ಟಿ | ಕಬ್ಬು ರೈತ |
| ಜಿ.ಸ್ವಾಮಿ | ನವಭಾರತ ಸೇನಾ | ಟಿಲ್ಲರ್ |
| ಅರುಣಾ ಎಸ್ ಹಿರೇಹಾಳ್ | ಪಕ್ಷೇತರ | ಲ್ಯಾಪ್‌ಟಾಪ್ |
| ಕಂಡಕ್ಟರ್ ಪಂಪಾಪತಿ | ಪಕ್ಷೇತರ | ವ್ಹಿಜಲ್ |
| ವೀರೇಶ | ಪಕ್ಷೇತರ | ಪ್ರೆಷರ್ ಕುಕ್ಕರ್ |

ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ.ತುಕಾರಾಮ್ ಅವರಿಗೆ ಕೈ ಚಿಹ್ನೆ, ಬಹುಜನ ಸಮಾಜ ಪಾರ್ಟಿಯ ಅಭ್ಯರ್ಥಿ ವಾಲ್ಮೀಕಿ ಕೃಷ್ಣಪ್ಪ ಅವರಿಗೆ ಆನೆ ಚಿಹ್ನೆ, ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಬಿ.ಶ್ರೀರಾಮುಲು ಅವರಿಗೆ ಕಮಲ ಚಿಹ್ನೆ ನೀಡಲಾಗಿದೆ.
ಅದರಂತೆ ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಸಿ.ಚನ್ನವೀರ ಅವರಿಗೆ ಬ್ಯಾಟರಿ ಟಾರ್ಚ್ ಚಿಹ್ನೆ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಷ್ಟ್) ಪಕ್ಷದ ಅಭ್ಯರ್ಥಿ ಎ.ದೇವದಾಸ್ ಅವರಿಗೆ ಆಟೋ ರಿಕ್ಷಾ ಚಿಹ್ನೆ, ಪ್ರಹರ್ ಜನಶಕ್ತಿ ಪಾರ್ಟಿಯ ಅಭ್ಯರ್ಥಿ ಮಂಜುನಾಥ ಗೋಸಲ ಅವರಿಗೆ ಕಬ್ಬು ರೈತ, ನವಭಾರತ ಸೇನಾ ಪಕ್ಷದ ಅಭ್ಯರ್ಥಿ ಜಿ.ಸ್ವಾಮಿ ಅವರಿಗೆ ಟಿಲ್ಲರ್ ಚಿಹ್ನೆ ನೀಡಲಾಗಿದೆ.
ಪಕ್ಷೇತರ ಅಭ್ಯರ್ಥಿಗಳಾದ ಅರುಣ್.ಎಸ್.ಹಿರೇಹಾಳ್ ಅವರಿಗೆ ಲ್ಯಾಪ್ ಟಾಪ್ ಚಿಹ್ನೆ, ಕಂಡಕ್ಟರ್ ಪಂಪಾಪತಿ ಅವರಿಗೆ ಸೀಟಿ (ವ್ಹಿಜಲ್), ವೀರೇಶ ಅವರಿಗೆ ಪ್ರೆಷರ್ ಕುಕ್ಕರ್ ಚಿಹ್ನೆಗಳನ್ನು ಹಂಚಿಕೆ ಮಾಡಲಾಗಿದ್ದು, ಮೇ 07 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದ್ದಾರೆ.

## ಏ.28ಕ್ಕೆ ವಿಜಯನಗರಕ್ಕೆ ಪ್ರಧಾನಿ ಮೋದಿ ಆಗಮನ

**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ಲೋಕಸಭಾ ಚುನಾವಣಾ ಕಣದಲ್ಲಿರುವ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಪರ ಪ್ರಚಾರ ನಡೆಸಲು ಪ್ರಧಾನಿ ಮೋದಿ ಅವರು ಏ.28ಕ್ಕೆ ನಗರಕ್ಕೆ ಆಗಮಿಸಲಿದ್ದು, ಅಂದು ಸಂಜೆ 5 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆಯಲ್ಲಿ ಮಾತನಾಡಲಿದ್ದಾರೆ. ಈ ಕುರಿತು ಈಗಾಗಲೇ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸ್ಥಳ ಪರೀಶೀಲನೆ ನಡೆಸಿ, ವೇದಿಕೆ ಸಿದ್ಧಗೊಳಿಸಲಾಗುತ್ತಿದೆ. ವಿಜಯನಗರ ಜಿಲ್ಲೆಯ ಮತ್ತು ಸುತ್ತಮುತ್ತಲಿನ ಜನಪ್ರತಿನಿಧಿಗಳು ಕಾರ್ಯಕರ್ತರು ಪಾಲ್ಗೊಳ್ಳಿದ್ದಾರೆ.

## ದಾಖಲೆ ಇಲ್ಲದ ರೂ.23 ಲಕ್ಷ ನಗದು ವಶಕ್ಕೆ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಮಲೇಶ್ ಎನ್ನುವ ವ್ಯಕ್ತಿಯ ಮನೆಯಲ್ಲಿ ಸೂಕ್ತ ದಾಖಲೆಯಿಲ್ಲದ ರೂ.23 ಲಕ್ಷದ ನಗದನ್ನು ಬುಧವಾರ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದ್ದು, ಆದಾಯ ತೆರಿಗೆ ಇಲಾಖೆಗೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.
ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಖಚಿತ ಮಾಹಿತಿ ಮೇರೆಗೆ ಎಫ್‌ಎಸ್‌ಟಿ ಮತ್ತು ಎಸ್‌ಎಸ್‌ಟಿ ತಂಡಗಳು ದಾಳಿ ನಡೆಸಿ, ಜಪ್ತಿ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.
ಅದೇರೀತಿಯಾಗಿ ವಿವಿಧೆಡೆ ಅಬಕಾರಿ ಇಲಾಖೆ ಪೊಲೀಸ್ ಅಧಿಕಾರಿಗಳಿಂದ 30.06 ಲೀ. (ಅಂದಾಜು ರೂ.15,148 ಮೌಲ್ಯದ) ಮದ್ಯ ವಶಪಡಿಸಿಕೊಳ್ಳಲಾಗಿದೆ ಮತ್ತು 0.08 ಕೆ.ಜಿ (ಅಂದಾಜು ರೂ.1,400 ಮೌಲ್ಯದ) ಗಾಂಜಾ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

## ಮೆಹಂದಿಯಲ್ಲಿ ಅರಳಿದ ಮತದಾನ ಜಾಗೃತಿ

### ಕುರುಗೋಡು ಪಟ್ಟಣದಲ್ಲಿ ಪಂಜಿನ ಮೆರವಣಿಗೆ | ಮತದಾನ ಮಾಡಿ





■ **ಹಂಪಿ ಟೈಮ್ಸ್ ಕುರುಗೋಡು**

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಕುರುಗೋಡು ತಾಲ್ಲೂಕು ಆಡಳಿತ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಪುರಸಭೆ ಇವರ ಸಂಯುಕ್ತಾಶ್ರಯದಲ್ಲಿ ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಕುರುಗೋಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬುಧವಾರ ಸಂಜೆ ಪಂಜಿನ ಮೆರವಣಿಗೆ ನಡೆಸಿ ಜನರಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು.
ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ವಿ.ನಿರ್ಮಲಾ ಅವರು ಜಾಥಾಗೆ ಚಾಲನೆ ನೀಡಿ ಮಾತನಾಡಿ, ಮೇ 07 ರಂದು ನಡೆಯವ ಲೋಕಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಮತದಾನ ಮಾಡಿ ಜಿಲ್ಲೆಗೆ ಮಾದರಿಯಾಗಬೇಕು ಎಂಬ ಉದ್ದೇಶದಿಂದ ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಜ್ಞಾವಂತ ಮತದಾರರು ತಪ್ಪದೆ ಮತದಾನ ಮಾಡಿ ಎಂದು ಸಲಹೆ ನೀಡಿದರು.
ಹಣಕ್ಕೆ ಮತ ಮಾರಿಕೊಳ್ಳಬೇಡಿ, ಅಭಿವೃದ್ಧಿ ಬಗ್ಗೆ ಕಾಳಜಿ ಇರುವ ಅರ್ಹರಿಗೆ ಮತ ನೀಡಿ, ಮತದಾನ ನಮ್ಮ ಹಕ್ಕು ಎನ್ನುವ ಘೋಷಣೆಗಳನ್ನು ಕೂಗಿದರು.
ಕುರುಗೋಡು ತಾಲ್ಲೂಕಿನ ದಮ್ಮೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಶ್ರೀ ಸದ್ಗುರು ಶ್ರೀ ವೆಂಕಾವಧೂತರ ದೇವಸ್ಥಾನದ ಆವರಣದಲ್ಲಿ ಮತದಾನ ಜಾಗೃತಿ ಅಂಗವಾಗಿ ವಿನೂತನವಾಗಿ ಮೆಹಂದಿ ಕಾರ್ಯಕ್ರಮ ನಡೆಯಿತು. ಸ್ವ-ಸಹಾಯ ಸಂಘದ ಮಹಿಳೆಯರಿಗೆ ಮೆಹಂದಿ ಬರೆಯುವ ಮೂಲಕ ಮೇ 07 ರಂದು ತಪ್ಪದೇ ಮತದಾನ ಮಾಡುವಂತೆ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಹಾಯಕ ನಿರ್ದೇಶಕ ಶಿವರಾಮ ರೆಡ್ಡಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ಅನೀಲ್ ಕುಮಾರ್, ತಾಲ್ಲೂಕು ಯೋಜನಾಧಿಕಾರಿ ರಾಧಿಕಾ, ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ತಾಲ್ಲೂಕು ಪಂಚಾಯತ್ ಸಿಬ್ಬಂದಿ ವರ್ಗದವರು, ಸ್ವ-ಸಹಾಯ ಸಂಘದ ಮಹಿಳೆಯರು ಮತ್ತು ಆಶಾ-ಕಾರ್ಯಕರ್ತೆಯರು ಭಾಗವಹಿಸಿದ್ದರು.

## ಕೊಟ್ಟೂರು ತಾಲೂಕಧ್ಯಕ್ಷರಾಗಿ ಪತ್ರಕರ್ತ ದೇವವರಮನಿ ಸುರೇಶ ಅವಿರೋಧ ಆಯ್ಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ದೇವರಮನಿ ಸುರೇಶ ಗುರುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾಧ್ಯಕ್ಷ ಸತ್ಯನಾರಾಯಣ ತಿಳಿಸಿದರು.



ತಾಲೂಕು ಅಧ್ಯಕ್ಷ ಸ್ಥಾನ ತೆರವಾಗಿದ್ದ ಕಾರಣ ಪತ್ರಕರ್ತರ ಸಹಮತದೊಂದಿಗೆ ಪತ್ರಕರ್ತರ ಸಂಘದ ಕಚೇರಿಯಲ್ಲಿ ಜರುಗಿದ ಆಯ್ಕೆ ಪ್ರಕ್ರಿಯೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಉಜ್ಜಿನಿ ರುದ್ರಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಲಕ್ಷ್ಮಣ್, ಖಜಾಂಚಿ ಎಚ್. ವೆಂಕಟೇಶ ಹಾಗೂ ಕೂಡ್ಲಿಗಿ ತಾಲೂಕಧ್ಯಕ್ಷ ಮಯೂರ, ಹರಪನಹಳ್ಳಿ ತಾಲೂಕಧ್ಯಕ್ಷ ಟಿ.ಚಂದ್ರಪ್ಪ, ಹಿರಿಯ ಪತ್ರಕರ್ತ ವೀರೇಶ, ಪತ್ರಕರ್ತರ ಸಂಘದ ಪದಾಧಿಕಾರಿಗಳಾದ ಸಿ.ಕೆ. ನಾಗರಾಜ್, ಎಂ.ರವಿಕುಮಾರ್, ಪಿ. ವೆಂಕೋಬ ನಾಯ್ಕ, ಬದ್ದಿ ಮಂಜುನಾಥ, ಸದಸ್ಯರಾದ ಜಿ.ಸೋಮಶೇಖರ್, ಬಂದಾತರ ಪ್ರಕಾಶ್, ನಾಗರಾಜ್, ವಿಜಯಕುಮಾರ್, ಜಿ.ರವಿಕುಮಾರ್, ಇತರರಿದ್ದರು.

**ಮಕ್ಕಳ ಅಂಕಗಳ ಮೇಲಿರುವ ಕಾಳಜಿ, ಮತದಾನದ ಮೇಲೂ ಇರಲಿ**

HAMPI TIMES VIJAYANAGARA

## ಬೆಳಕಿನ ಹಾದಿ

# ಸೀಮಿತ ಬದುಕಿನ ವಿಸ್ತರಣೆ

**■ ಗುರು ಹಿರೇಮಠ, ಹಗರಿಬೊಮ್ಮನಹಳ್ಳಿ**



ಇಂದಿನ ವರ್ತಮಾನದ ಸನ್ನಿವೇಶದಲ್ಲಿ ಬಹುತೇಕ ಎಲ್ಲರೂ ತಮ್ಮ ತಮ್ಮ ಬಗೆಗೆ ಹೆಚ್ಚು ಕಾಳಜಿಯ ಜೊತೆಗೆ ಆರಾಮದಾಯಕ ಜೀವನಶೈಲಿಯನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅದು ಸಹಜ ಮಾನವ ಸ್ವಭಾವವಾದರೂ ನಮ್ಮ ಬಗ್ಗೆ ನಮಗಿರುವ ಅತಿಯಾದ ಗಮನ, ಕಾಳಜಿ ಒಂದು ರೀತಿಯಲ್ಲಿ ವ್ಯಾಪಾರಿ ಮನೋಭಾವವನ್ನು ಸೃಷ್ಟಿಸಿದೆ. ನಿಸರ್ಗದೊಂದಿಗಿನ ನಮ್ಮ ಸಂಬಂಧವು ಮತ್ತು ಅಲ್ಲಿ ನಡೆಯುವಂತಹ ವಿದ್ಯಮಾನಗಳಿಗೆ ನಾವು ಅಂಧರಾಗಿದ್ದೇವೆ. ಯಾವುದೇ ಸನ್ನಿವೇಶವನ್ನು ಒಂದು ನಿಮಿಷ ನಿಂತು ನೋಡಿ ಹೋಗುವಂತಹ ತಾಳ್ಮೆಯನ್ನು ಸಹ ಕಳೆದುಕೊಂಡಿದ್ದೇವೆ. ಒಂದು ಕ್ಷಣ ನಾವು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವಂತಹ ಎಲ್ಲ ಕ್ರಿಯೆಗಳಿಗೆ ಸಾಕ್ಷಿಯಾದಾಗ ಈ ಜೀವನವು ಎಷ್ಟು ಅದ್ಭುತ ಎಂಬ ಭಾವ ಮೂಡುತ್ತದೆ.

ನಾವು ದಾರಿಯಲ್ಲಿ ಸುಮ್ಮನೆ ಸಾಗುವಾಗ ಮರದ ಕೆಳಗೆ ನೆರಳಿನಲ್ಲಿ ಕುಳಿತುಕೊಳ್ಳುವುದು, ಅಲ್ಲಿನ ಹಿತಕರವಾದ ವಾತಾವರಣದಲ್ಲಿ ನಿಧಾನವಾಗಿ ಬೀಸುವ ಗಾಳಿಗೆ ನಮ್ಮನ್ನು ನಾವು ತೆರೆದುಕೊಳ್ಳುವುದು, ಗಿಡ ಮರಗಳ ಸುತ್ತಲೂ ಹಾರಾಡುವ ಪಕ್ಷಿಗಳ ಸ್ವಾತಂತ್ರ್ಯದ ಸಂಭ್ರಮವನ್ನು ಆಸ್ವಾದಿಸುವುದು. ತಮ್ಮದೇ ಜಗತ್ತಿನಲ್ಲಿ ಸುಮ್ಮನೆ ಆಹಾರ ಅರಸುತ್ತಿರುವ ದನಕರುಗಳು, ಹಾಗೇನೆ ದಾರಿಯಲ್ಲಿ ಗುಂಪು ಗುಂಪಾಗಿ ಏನೋ ಒಂದು ಉದ್ದೇಶವನ್ನು ಇಟ್ಟುಕೊಂಡು ಅವಸರದಲ್ಲಿ ಸಾಗುತ್ತಿರುವಂತೆ ತೋರುವ ಕುರಿಗಳು. ಊರು ಹಾಗೂ ಊರ ಸುತ್ತಮುತ್ತಲು ಸುತ್ತಾಡಿ ಸಂಜೆಗೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಭೆ ಸೇರಿ ವಿಶ್ರಾಂತಿ ಪಡುವಂತಹ ಬೀದಿ ದನಗಳು. ಇವೆಲ್ಲವೂ ನಮ್ಮಲ್ಲಿ ಸಂತಸದ ಭಾವವನ್ನು ಮೂಡಿಸುವಂತಹ ಸನ್ನಿವೇಶಗಳು.

ನಾವು ವಾಹನದಲ್ಲಿ ಸಂಚರಿಸುವಾಗ ತಮಷ್ಟಕ್ಕೆ ತಾವೇ ಹಿಂದೆ ಚಲಿಸುವಂತೆ ಭಾಸವಾಗುವ ಗಿಡಮರಗಳು. ರಸ್ತೆ ಮೇಲೆ ಸಂಚರಿಸುವ ವಾಹನಗಳಿಂದ ತಪ್ಪಿಸಿಕೊಂಡು, ನಮ್ಮ ಕಡೆ ಒಂದು ಕ್ಷಣ ನೋಡಿ ಗುರಾಯಿಸುತ್ತಾ ಅವಸರದಲ್ಲಿ ಓಡಿ ಹೋಗುವಂತಹ ತಾಯಿ ಹಂದಿ ಮತ್ತು ಅದರ ಮರಿಗಳು. ಯಾವುದೇ ವಾಹನದ ಹಾರ್ನ್ ಸೌಂಡಿಗೆ ಜಗ್ಗದೆ, ಕುಗ್ಗದೆ, ಎದೆಗುಂದದೆ ಯಾವುದಕ್ಕೂ ತಲೆಕೆಡಿಸಿಕೊಳ್ಳದ ನಿಧಾನವಾಗಿ ಸಾಗುವ ಎಮ್ಮೆಗಳು. ಎಲ್ಲವೂ ಒಂದು ರೀತಿಯಲ್ಲಿ ವಿಭಿನ್ನ ಅನುಭವ ನೀಡುವ ಸನ್ನಿವೇಶಗಳು ನಮ್ಮ ನಿತ್ಯ ಬದುಕಿನ ಪ್ರಮುಖ ಭಾಗಗಳಾಗಿರುತ್ತವೆ. ಆದರೆ ನಾವು ಸ್ವಲ್ಪ ಲೆಕ್ಕಾಚಾರದ ಮನಸ್ಥಿತಿಯಿಂದ ಹೊರಬಂದು ಆರಾಮದಾಯಕ ಸ್ಥಿತಿಯಲ್ಲಿ ಇವೆಲ್ಲವುಗಳಿಗೆ ಪ್ರಾಮಾಣಿಕವಾಗಿ ಸಾಕ್ಷಿಯಾದಾಗ ಮಾತ್ರ ನಮಗೆ ಬದುಕಿನ ಸಹಜ ಸೌಂದರ್ಯದ ಅನುಭೂತಿಯಾಗುತ್ತದೆ. ಅತಿಯಾದ ಸ್ವಾಭಿಮಾನ ಮತ್ತು ಅರ್ಥವಿಲ್ಲದ ಗಂಭೀರತೆಗೆ ಸಿಲುಕಿದ ಜೀವನ ಪದ್ಧತಿಯು ನಮ್ಮನ್ನು ರೋಗಗ್ರಸ್ತ ವ್ಯವಸ್ಥೆಗೆ ತಳ್ಳುತ್ತದೆ. ಹೀಗೆ ನಾವು ನಮ್ಮ ಬದುಕಿನ ಹಾಗೂ ನಿಸರ್ಗದ ಎಲ್ಲ ವಿದ್ಯಮಾನಗಳಿಗೆ ಮುಕ್ತ ಮನಸ್ಸಿನಿಂದ ಸಾಕ್ಷಿಯಾದ ಸೀಮಿತವಾದ ನಮ್ಮ ಬದುಕು ವಿಸ್ತರಣೆಗೊಳ್ಳುತ್ತ ಸಾಗುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for
EVENT COVERAGE
& Advertisements
in Leading
Hampi Times local
Daily News Paper
M: 94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಒಳ್ಳೆಯ ಕೆಲಸಕ್ಕೆ ಇಂದು ನಾಳೆ ಏಕೆ?

ಸಾಮಾನ್ಯವಾಗಿ ಲೋಕದಲ್ಲಿ ಎರಡು ಬಗೆಯ ಜನರನ್ನು ಕಾಣಬಹುದು. ಒಂದು ಸತ್ತು ಬದುಕಿದವರು ಇನ್ನೊಂದು ಬದುಕಿ ಸತ್ತವರು. ಬದುಕಿನುದ್ದಕ್ಕೂ ನಿಸ್ವಾರ್ಥ ಹಿತ ಚಿಂತನೆಯಿಂದ ಯಾವ ಪ್ರತಿಫಲಾಪೇಕ್ಷೆಯಿಲ್ಲದೇ ಇರುವುದು, ಇತರರಿಗಾಗಿ ಮನ ಮಿಡಿಯುತ್ತಾ ಮಾನವ ಸೇವೆಯೇ ಮಾಧವನ ಸೇವೆಯೆಂದು ಭಾವಿಸುವುದು, ಹೀಗೆ ಯಾರು ಉಪಕೃತರಾಗಿರುತ್ತಾರೋ ಅವರು ಉಳಿದವರ ಪಾಲಿಗೆ ದೇವರಾಗಿ ಕಾಣುತ್ತಾರೆ. ಇವರೆಲ್ಲಾ ಸತ್ತರೂ ಬದುಕಿದಂತೆ. ಕೇವಲ ಹಣ, ಅಧಿಕಾರ, ಸ್ವಾರ್ಥ ಭಾವನೆಯಿಂದ ಪರೋಪಕಾರದ ಬುದ್ಧಿ ಇಲ್ಲದಿರುವುದು, ಕಠಿಣ ಹೃದಯ ಹೊಂದಿರುವುದು, ಇವರೆಲ್ಲಾ ಜೀವಂತ ಶವವಾಗಿರುತ್ತಾರೆ.

ಸಾಮಾನ್ಯವಾಗಿ ಬಾಲ್ಯದಿಂದಲೇ ಕೆಲವು ಮಕ್ಕಳು ವಿಚಿತ್ರ ಸ್ವಭಾವದವರಾಗಿರುತ್ತಾರೆ. ಅಂತವರ ಗುಣಗಳನ್ನು ಅರಿತು ಪೋಷಕರು ಅಧ್ಯಯನ, ಅಧ್ಯಾಪನ ಸದ್ವಿಚಾರ ಮತ್ತು ಒಳ್ಳೆಯ ಪರಿಸರದ ಮೂಲಕ ಉತ್ತಮ ಸಂಸ್ಕಾರಗಳನ್ನು ನೀಡಿದಾಗ ಅವರು ಸುಸಂಸ್ಕೃತರಾಗುತ್ತಾರೆ. ಅವರಿಗೆ ಆರಂಭದಿಂದಲೇ ಮಾನವೀಯ ಗುಣಗಳು ಬರುತ್ತವೆ. ಇದಕ್ಕಾಗಿ ಸಜ್ಜನರ ಸಂಗ ಮಾಡಬೇಕು. ಶಂಕರಾ ಚಾರ್ಯರು ಹೇಳಿದಂತೆ: "ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ ನಿರ್ಮೋಹತ್ವೇ ನಿಶ್ಚಲತತ್ವಂ ನಿಶ್ಚಲತತ್ವೇ ಜೀವನ್ಮುಕ್ತಃ" ಇದೆಲ್ಲಾ ಸಾಧನೆಯ ಬಲದಿಂದ ಬರುತ್ತದೆ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Scan For Digital Colourful HAMPI TIMES E-paper

ನಾವು ಯಾವಾಗಲೂ ತುಂಬಿದ ಕೊಡದಂತೆ ಇರಬೇಕು. 'ಅಲ್ಪವಿದ್ಯೆ ಮಹಾಗರ್ವಿ' ಎಂಬ ಗಾದೆ ಮಾತಿನಂತೆ ಅಲ್ಪಜ್ಞಾನಿಯಾದವ ಸಣ್ಣ ಸಾಧನೆ ಮಾಡಿ ದೊಡ್ಡ ಡಂಗುರ ಹೊಡೆಯಿಸಿಕೊಳ್ಳುತ್ತಾನೆ. ಮಹಾಜ್ಞಾನಿಯಾದವ ಸಾಧನೆ ಮಾಡುತ್ತಾನೆ ವಿನಃ ಪ್ರಚಾರ ಬಯಸಲಾರ. ಅದು ಅವನಿಗೆ ತನ್ನಿಂದ ತಾನೇ ಒದಗಿ ಬರುತ್ತದೆ. ಯಾರು ಜ್ಞಾನದ ಹಾದಿಯಲ್ಲಿ ವಿವೇಕವನ್ನು ಪಡೆಯುವರೋ ಅವರಿಗೆ ಅಹಂಕಾರದ ಗುಣಗಳು ಇರುವುದಿಲ್ಲ.

ವಿಷಯ ಉಪಭೋಗಗಳ ಆಸೆಗೆ ಭಂಡನಾದರೆ ಅಜ್ಞಾನದಿಂದ ಅಂಧಕಾರದಲ್ಲಿ ಮುಳುಗಬೇಕಾಗುತ್ತದೆ. ಅಸುರೀ ಗುಣಗಳ ತೊಡೆದು ದೈವೀಗುಣಗಳನ್ನು ಅಳವಡಿಸಿಕೊಂಡು ದಯೆ, ಪ್ರೇಮ, ಸ್ನೇಹ, ವಾತ್ಸಲ್ಯ ಮೈಗೂಡಿಸಿಕೊಂಡು ಮಾನವೀಯತೆ ಬೆಳೆಸಿಕೊಳ್ಳುವುದು. ವೃಥಾ ಮೋಸ, ವಂಚನೆ, ಸುಳ್ಳು, ದಗಾ ಮಾಡಿದರೆ ನಾವು ಉಣ್ಣುವ ಅನ್ನ ವಿಷವಾದೀತೆಂಬ ಸತ್ಯ ತಿಳಿಯಬೇಕು. ನಾವು ಏನೆಲ್ಲಾ ಗಳಿಸಿದರೂ ತಿನ್ನುವುದು ಒಂದು ಹಿಡಿ ಅನ್ನ, ಮಲಗುವುದು ಅರ್ಧ ಮಂಚವಷ್ಟೆ. ನಾನು ನನ್ನದು ಎಂಬ ಅಹಂಕಾರಕ್ಕಿಂತ ನೀನು ನಿನ್ನದೆಂಬ ಮಮಕಾರದಿಂದ ಪಾಪ ಪುಣ್ಯ ಒಳಿತು-ಕೆಡಕುಗಳ ಅರಿವನ್ನಿಟ್ಟುಕೊಂಡು ಜೀವನ ಸಾಗಿಸಬೇಕು.

ಒಳ್ಳೆಯ ಮಾರ್ಗದಲ್ಲಿ ನಡೆಯುವಾಗ ಇತರರು ತಿಳಿಯದೇ ನಮ್ಮನ್ನು ನೋಡಿ ನಗಬಹುದು, ನಿಂದಿಸಬಹುದು ಇದಕ್ಕೆಲ್ಲಾ ಲಕ್ಷ್ಯಗೊಡದೆ ನಮ್ಮ ಕೆಲಸಗಳನ್ನು ನಿಷ್ಠೆಯಿಂದ ಮಾಡುವುದು. ನಮ್ಮ ಮುಂದೆ ನಿಂದಿಸಿದವರೇ ನಂತರ ಹೊಗಳಿ ಆಶ್ಚರ್ಯ ಪಡುತ್ತಾರೆ. ಹಾಗಾಗಿ ದಾಸರು ಹೇಳಿದಂತೆ ನಿಂದಕರಿರಬೇಕು ಜಗದಲಿ ಎಂಬುದು ಎಲ್ಲರೂ ಒಪ್ಪುವಂತಹ ಮಾತು.

ಕೆಲವೊಮ್ಮೆ ನಮ್ಮ ಮನಸ್ಸು ಬಹುಬೇಗ ಸಿರಿವಂತನಾಗಬೇಕೆಂದು ದುರ್ಮಾರ್ಗ, ದುಷ್ಟ ಚಿಂತನೆ, ದುರಾಚಾರ ದುಷ್ಟ ವ್ಯಕ್ತಿತ್ವ ಹೊಂದುವುದು ಸಹಜ. ಹಾಗೆ ಕೆಟ್ಟ ಚಟಗಳಿಗೆ ಬಲಿಯಾದರೆ ಅವು ಬೇಗನೆ ನಮ್ಮನ್ನು ಅಡ್ಡದಾರಿಗೆಳೆಯುತ್ತವೆ. ಕಷ್ಟದಾಯಕವಾದರೂ ಅಚಲ ಶ್ರದ್ಧಾಭಕ್ತಿಗಳನ್ನಿಟ್ಟುಕೊಂಡು ಸನ್ಮಾರ್ಗದತ್ತವಾಗಿ ಸದ್ಗುಣ ಸದುದ್ದೇಶಗಳಿಂದ ಮುಂದುವರೆದರೆ ಮಾನವ ಮಾಧವನಾಗುತ್ತಾನೆಂಬುದು ಸತ್ಯ.

ಅದಕ್ಕಾಗಿ ನಾಳೆ ಮಾಡುವುದನ್ನು ಇಂದೇ ಮಾಡುವುದು ಇಂದು ಮಾಡುವುದನ್ನು ಈಗಲೇ ಮಾಡುವುದು ರೂಢಿಸಿಕೊಳ್ಳಬೇಕು. 'ನಾಳೆ ಬಪ್ಪುದು ಈಗಲೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ ಇದಕ್ಕಾರಂಜುವರು ಇದಕ್ಕಾರಳುಕುವರು? ಎಂದು ಬಸವಣ್ಣನವರು ಹೇಳಿದಂತೆ ಇಷ್ಟಕ್ಕೂ ನಾಳೆಯತನಕ ನಾವು ಬದುಕಿರುತ್ತೇವೆಂಬುದಕ್ಕೆ ಏನು ಸಾಕ್ಷಿ? Yesterday`s the past, tommorrow`s the future, but today is a gift. That `s why it is called thepresent. ಹಾಗಾಗಿ ನಮ್ಮಿಂದ ಸತ್ಕಾರ್ಯ ನಡೆಯುವುದಾದರೆ ಹಿಂದೆ-ಮುಂದೆ ಯೋಚಿಸದೇ ಕಾರ್ಯಪ್ರವೃತ್ತರಾಗುವುದು ಒಳ್ಳೆಯದು. ನಮಗಾಗಿ ಭಗವಂತ ಏನೆಲ್ಲಾ ಅನುಕೂಲ ಕಲ್ಪಿಸಿ ಗಾಳಿ, ನೀರು, ಆಹಾರಾದಿಗಳನ್ನು ಕೊಟ್ಟಿದ್ದಾನೆ. ನಾವು ಅವುಗಳನ್ನು ಸರಿಯಗಿ ಬಳಸಿಕೊಳ್ಳದೇ ದಿನದಿನಕ್ಕೂ ವಿಷಮಯವನ್ನಾಗಿ ಮಾಡುತ್ತಿದ್ದೇವೆ. ಹುಟ್ಟಿದಾಗಿನಿಂದ ಒಂದೊಂದು ಕ್ಷಣ ಉರುಳಿದಾಗಲೂ ನಮ್ಮ ಆಯಸ್ಸು ಕಡಿಮೆಯಾಗುತ್ತಲೇ ಹೋಗುತ್ತದೆ. ಜೀವನವೆಂಬುದು ನೀರ ಮೇಲಣ ಗುಳ್ಳೆಯಿದ್ದಂತೆ. ಆದ್ದರಿಂದ ಕೆಟ್ಟದ್ದನ್ನು ಪ್ರತಿಭಟಿಸಿ, ಒಳ್ಳೆಯದನ್ನು ಪ್ರೋತ್ಸಾಹಿಸಿ ಲೋಕಸೇವೆಯಲ್ಲಿ ಧನ್ಯತಾಭಾವ ಕಾಣಬೇಕಿದೆ. ಈ ಸಂದರ್ಭದಲ್ಲಿ ಡಿವಿಜಿಯವರ ಮಾತು ನೆನಪಾಗುತ್ತದೆ.




ಮೆದುಳ್ಗನ್ನಡಿ

**ಸತ್ತೆನೆಂದೆನಬೇಡ ಸೋತೆನೆಂದೆನಬೇಡ,**
**ಬತ್ತಿತೆನ್ನೊಳು ಸತ್ವದೂಟೆ ಎನ್ನಬೇಡ**
**ಮೃತ್ಯುವೆನ್ನುವುದೊಂದು ತೆರೆ ಇಳಿತ ತೆರೆ ಏರು**
**ಮತ್ತೆ ತೋರ್ಪುದು ನಾಳೆ ಮಂಕುತಿಮ್ಮ.**

ಪ್ರತಿದಿನವೂ ಹುಟ್ಟು ಸಾವುಗಳ ಭಯ ಇದ್ದೇ ಇರುತ್ತದೆ. ಈ ಬಗೆಗೆ ತಲೆಕೆಡಿಸಿಕೊಳ್ಳದೇ ಕೈಲಾದ ಮಟ್ಟಿಗೆ ಲೋಕಕ್ಕೆ ಒಳಿತನ್ನೇ ಮಾಡೋಣ.

# ನೇಹಾಳ ಸಾವಿಗೆ ಸ್ತ್ರೀ ಕಾರಣವಾಯಿತೇ?

**■ ಡಾ. ಶೈಲಜ ಪವಾಡಶೆಟ್ರ ಹೂವಿನ ಹಡಗಲಿ**

ಯುಗಾದಿ ಹಬ್ಬದ ದಿನ ಹಿರಿಯರು ಪಂಚಾಂಗ ಶ್ರವಣ ಮಾಡಿದರು. ಇನ್ನು ಕ್ರೋಧಿ ನಾಮ ಸಂವತ್ಸರ ಪ್ರಾರಂಭವಾಗುತ್ತದೆ ಇದು ಒಳ್ಳೆಯದಲ್ಲ. ಹೆಚ್ಚು ಮೋಸ ವಂಚನೆಗಳೆ ನಡೆಯುತ್ತವೆ ಎಂದು ಹೇಳಿದ್ದನ್ನು ಕೇಳಿ ಮನಸ್ಸು ಸ್ವಲ್ಪ ಆತಂಕ ಬೇಸರದಲ್ಲಿ ಇರುವಾಗಲೇ ನೇಹಾಳ ಪ್ರಕರಣ ಆಘಾತವನ್ನುಂಟು ಮಾಡಿತು. ಇಲ್ಲಿ ನೇಹಾಳ ಸಾವನ್ನು ಯಾವುದೇ ಒಂದು ಜಾತಿ ಧರ್ಮ ಪಕ್ಷಕ್ಕೆ ಸೀಮಿತಗೊಳಿಸಿ ಮಾತನಾಡುವುದಕ್ಕಿಂತ, ಒಂದು ಜೀವ(ಪ್ರಾಣ)ಕ್ಕಿರುವ ಮಹತ್ವದ ನೆಲೆಯಲ್ಲಿ ಮಾತಾಡುತ್ತಿದ್ದೇನೆ.

ನೇಹಾಳ ಪ್ರಕರಣವಾದಾಗಿನಿಂದ ನಿನಗೆ ಏನು ಬರೆಯಲು ಮನಸ್ಸು ಸಮಸ್ಥಿತಿಗೆ ಬರುತ್ತಿಲ್ಲ ಗೊಂದಲದ ಗೂಡಾಗಿದೆ. ಆಡಳಿತ ಪಕ್ಷದ ಕಾರ್ಪೊರೇಟರ ಮಗಳ ಸ್ಥಿತಿ ಹೀಗಾದರೆ ಸಾಮಾನ್ಯರ ಪಾಡೇನು? ನೇಹಾ ಹಿರೇಮಠರ ಪ್ರಕರಣ ಆದಾಗಿನಿಂದ ಎಲ್ಲರ ಸಂದೇಶಗಳನ್ನು ಗಮನಿಸುತ್ತಿದ್ದೇನೆ ಕಾಲೇಜಿನಲ್ಲಿ ಓದುವ ಹೆಣ್ಣು ಮಕ್ಕಳೇ ಹುಷಾರ್! ಲಿಂಗಾಯತ ಹೆಣ್ಣು ಮಕ್ಕಳೇ ಎಚ್ಚರವಾಗಿರಿ! ಇತ್ಯಾದಿ ಇತ್ಯಾದಿ. ಈ ಸಂದೇಶಗಳ ತಾತ್ಪರ್ಯ ಹೆಣ್ಣು ಮಕ್ಕಳು ಅಬಲೆಯರು ಅಶಕ್ತರು ಹೆಣ್ಣು ಹೆತ್ತವರು ಸದಾ ಎಚ್ಚರವಾಗಿರಬೇಕು ಭಯದ ಮನಸ್ಥಿತಿಯಲ್ಲಿರಬೇಕು ಎನ್ನುವಂತಿದೆ.



ನನ್ನ ಪ್ರಶ್ನೆ ಇಷ್ಟೇ ಇತ್ತೀಚಿಗೆ ಸರಳ ವಾಸ್ತು ತಜ್ಞರ ಹತ್ಯೆ ಹಾಡು ಹಗಲೇ ನಡೆದ ನೆನಪು ಮಾಸಿಲ್ಲ. ಎಷ್ಟೋ ಕೊಲೆ ಮಾಡಿ ದಕ್ಕಿಸಿಕೊಂಡ ದೊಡ್ಡ ರೌಡಿಗಳು ಈ ರೀತಿ ಕೊಲೆಯಾದ ಸಾಕಷ್ಟು ಉದಾಹರಣೆಗಳು ಕಣ್ಮುಂದಿವೆ. ಇಲ್ಲಿ ಪ್ರಶ್ನೆ ಹೆಣ್ಣು ಗಂಡು ಅನ್ನುವುದಲ್ಲ ಮೋಸ ವಂಚನೆ ಅನ್ನುವುದು ಯಾವುದೇ ಪೂರ್ವ ಕಲ್ಪನೆ ಕೂಡ ಇಲ್ಲದವರ ಮೇಲೆ ಏಕಾಏಕಿ ಆಕ್ರಮಣ ಮಾಡಿದಾಗ ಎಂಥ ಬಲಿಷ್ಠನೂ ಬಲಿಯಾಗುವುದು ಸಹಜ.

ಪೌರಾಣಿಕ ಕಥೆಗಳನ್ನು ನೋಡಿದಾಗ. ರಾಕ್ಷಸರ ಸಂಹಾರ ಮಾಡಿದ್ದು ಹೆಣ್ಣು ದೇವತೆಗಳೇ. ಬ್ರಹ್ಮ ವಿಷ್ಣು ಮಹೇಶ್ವರರ ಪಕ್ಕದಲ್ಲಿ ಲಕ್ಷ್ಮಿ ಸರಸ್ವತಿ ಪಾರ್ವತಿ ಇಲ್ಲದೆ ಹೋದರೆ ಅವರ ಕೈಕಾಲುಗಳೆ ಆಡುವುದಿಲ್ಲ. ಶಿವ ತನ್ನ ದೇಹದ ಅರ್ಧ ಭಾಗವನ್ನು ಪಾರ್ವತಿಗೆ ಅರ್ಪಿಸಿದ್ದಾನೆ. ಇಡೀ ಜಗತ್ತಿನ ಅನ್ನದಾತೇ ಜನ್ಮದಾತೆ ಹೆಣ್ಣು. ಮಕ್ಕಳ ಮೊದಲ ಗುರು ಹೆಣ್ಣು. ಭುವನೇಶ್ವರಿ ಭಾರತಾಂಬೆ ಹೆಣ್ಣು. ಹೋರಾಟ ಹಾರಾಟ ಸಂಶೋಧನೆ ದುಡಿಮೆ ಸಾಧನೆ ಸಾಹಸ ಯಾವ ಕ್ಷೇತ್ರವೇ ಆಗಲಿ ಹೆಣ್ಣಿದ್ದಾಳೆ. ತನ್ನ ಜವಾಬ್ದಾರಿಗಳನ್ನು ಹೆಚ್ಚುಕಟ್ಟಾಗಿ ನಿಭಾಯಿಸುತ್ತಾ ಬಂದಿದ್ದಾಳೆ.

ಈ ಹಿಪ್ನಾಟಿಸಂ (ವಶೀಕರಣ) ಅನ್ನುತ್ತಾರಲ್ಲ ಹಾಗೆ ನೀನು ಹೆಣ್ಣು ಅಂದಂದೆ ಆಕೆಯೊಳಗಿನ ಬಲಿಷ್ಠತೆಯನ್ನು ನಿಷ್ಕ್ರಿಯಗೊಳಿಸುತ್ತೇವೆ. ಹೆಣ್ಣಿಗೆ ಜನ್ಮ ಕೊಟ್ಟು ಗೊತ್ತು, ಜೋಗುಳ ಹಾಡಿ ಗೊತ್ತು, ಮುದ್ದಿಸಿ ಗೊತ್ತು, ಹಸಿದವರಿಗೆ ಅನ್ನ ಹಾಕಿ ಗೊತ್ತು, ಅನಾಥರಿಗೆ ಆಶ್ರಯವಾಗಿ ಗೊತ್ತು, ನೊಂದವರಿಗೆ ನೊಗವಾಗಿ ಗೊತ್ತು. ಇವತ್ತಿನವರೆಗೂ ಜಗತ್ತಿಗೆ ತಾಯಿಯದ ಮದರ್ ತೆರೇಸಾನ ಸ್ಥಾನವನ್ನು ಯಾವ ಪುರುಷನೂ ತುಂಬಿಲ್ಲ. ತಂದೆ ಸತ್ತರೆ ಮಗು ಅನಾಥವಾಗುವುದಿಲ್ಲ, ಅದೇ ತಾಯಿ ಸತ್ತರೆ ಅನಾಥ.

ಹೆಣ್ಣಿನ ಈ ಮೃದುತ್ವದೊಳಗೆ ಕಠೋರತೆಯು ಗೌಪ್ಯವಾಗಿರುತ್ತದೆ. 12ನೇ ಶತಮಾನದಲ್ಲೇ ಇಡೀ ರಾಜವ್ಯವಸ್ಥೆಯ ಧಿಕ್ಕರಿಸಿ ನೀರಿಗೆ ವಿರುದ್ಧವಾಗಿ ಈಜಿ ಬದುಕು ಕಟ್ಟಿದವಳು ಅಕ್ಕಮಹಾದೇವಿ. ಅಂತಹ ಕಠೋರ ದಿಟ್ಟ ಬದುಕನ್ನ ಇವತ್ತಿನವರೆಗೂ ಯಾವ ಪುರುಷನು ಬಾಳಿ ತೋರಿಸಿಲ್ಲ. ಹೆಣ್ಣು ಇವತ್ತಿನವರೆಗೂ ಯಾಸಿಡ್ ಹಾಕುವ, ಕತ್ತು ಕೊಯ್ಯುವ, ಕಲ್ಲೆಸೆದು ಜೀವ ತೆಗೆಯುವ ವಿಕೃತ ಮನಸ್ಥಿತಿಗೆ ಬಂದಿಲ್ಲ. ಹೆಣ್ಣಲ್ಲಿ ಕಠೋರತೆ ಇದೆ ವಿಕೃತತೆ ಇಲ್ಲ ಅದನ್ನು ಆಕೆಯ ಅಶಕ್ತತೆ ಅಂದು ಕೊಳ್ಳಬೇಡಿ. ಬ್ಯಾಟ್ ಹಿಡಿದು ಬಯಲಿಗೆ ಬಂದು ಕಪ್ಪು ತಂದವಳಿಗೆ, ತನ್ನ ರಕ್ಷಣೆಗೆ ಕಿತ್ತೂರು ರಾಣಿ ಚೆನ್ನಮ್ಮನಂತೆ ಕತ್ತಿ ಹಿಡಿದು ಹೋರಾಡಲು ಸಿದ್ಧಲು.

ನಾನು ಕೇಳುವುದು ಇಷ್ಟೇ ಹೆಣ್ಣಿನ ಕೋಮಲತೆಯನ್ನು ಕೋಮಲವಾಗಿರಲು ಬಿಡಿ ಕ್ರೋಧದ ಕಿಚ್ಚು ಹತ್ತಲು ಅವಕಾಶ ಮಾಡಬೇಡಿ. ನಮ್ಮ ಪ್ರಾಣ ನಾವು ಕಳೆದುಕೊಳ್ಳಲು ದಯಾಮರಣ ಕೇಳಬೇಕು. ಹೆತ್ತವರಿಗೂ ಮಕ್ಕಳ ಜೀವ ತೆಗೆಯುವ ಹಕ್ಕಿಲ್ಲ. ಅಂತದ್ದರಲ್ಲಿ ಯಾರೊ ಅನ್ಯ ವ್ಯಕ್ತಿ ಅರಳೆಯ ಗಾದೆಯನ್ನು ಚುಚ್ಚಿದ ಹಾಗೆ ನಿಷ್ಕರುಣೆಯಾಗಿ ದೇಹವನ್ನು ಚುಚ್ಚಿತ್ತಾನೆಂದರೆ, ತಂದೆ ತಾಯಿಗಳ ಸಂಕಟ ಎಂತದ್ದು. ಲವ್, ಲವ್ ಜಿಹಾದ್ ವಿಷಯ ಏನೇ ಇರಲಿ ಪ್ರಾಣ ತೆಗೆಯುವ ಹಕ್ಕು ಆತನದಲ್ಲ. ಕೊಲೆಗಡುಕ ನೇಹಾಳ ಕೊಲ್ಲಲು ಯಾರ ಅನುಮತಿ ಪಡೆದ. ಈಗ ಆತನ ಪ್ರಾಣ ತೆಗೆಯಲು ಕಾಗಕ್ಕ ಗುಬ್ಬಕ್ಕನ ಕಥೆಗಳೇಕೆ? ಇಂತಹ ಶಿಕ್ಷೆ ಇವತ್ತು ನಿನ್ನೆಯದಲ್ಲ. ಮೆಸಪಟೊಮಿಯಾ ನಾಗರಿಕತೆಯಲ್ಲಿ ಹಮ್ಮುರಾಬಿ ಆಗಲೇ ಇಟ್ಟಿಗೆಯ ಮೇಲೆ ಈ ರೀತಿ ಶಿಕ್ಷೆಗಳ ಶಾಸನ ಬರೆಸಿದ್ದಾನೆ. ಅಪರಾಧಿಯ ಗಲ್ಲಿಗೇರಿಸಿ ಒಂದೇ ಕ್ಷಣಕ್ಕೆ ಸಾಯಿಸುವುದಕ್ಕಿಂತ ಆತನ ಈ ಕೃತ್ಯಕ್ಕೆ ಉತ್ತೇಜಿಸಿದ ಆತನ ದೇಹದ ಆ ಅಂಗವನ್ನು ನಿಷ್ಕ್ರಿಯಗೊಳಿಸಿ, ಜೀವಂತ ಶವಗೊಳಿಸಬೇಕು ಆಗ ನೇಹಾಳ ಆತ್ಮಕ್ಕೆ ಶಾಂತಿ ಸಿಕ್ಕರೂ ಸಿಗಬಹುದು!

# ವಿದ್ಯೆ ವಿನಯತೆಯನ್ನು.. ದುಡಿಯುವುದನ್ನು ಕಲಿಸಬೇಕು

ಒಮ್ಮೆ ನಾವು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಕೆಲವೊಂದು ಯುವಕರ ಗುಂಪನ್ನು ಕಂಡೆವು ಅಲ್ಲಿದ್ದವರೆಲ್ಲ ನಮಗೆ ಪರಿಚಿತರಾಗಿದ್ದು ಮತ್ತು ಹಿಂದೆ ನಮ್ಮ ಶಾಲೆಯಲ್ಲಿ ಓದಿದ್ದ ವಿದ್ಯಾರ್ಥಿಗಳಾಗಿದ್ದರು ನಮ್ಮನ್ನು ನೋಡುತ್ತಿದ್ದಂತೆ ಬಂದು ಎಲ್ಲರೂ ನಮಸ್ಕರಿಸಿದರು. ಆ ಮಕ್ಕಳನ್ನು ಕಂಡು ಬಹಳ ಖುಷಿಯಾಯಿತು ಏಕೆಂದರೆ ಅವರು ಅಷ್ಟು ದೊಡ್ಡವರಾದರು ಅಷ್ಟೇ ವಿಧೇಯತೆ ವಿನಯತೆಯನ್ನು ಎಂದು... ಮರೆತಿರಲಿಲ್ಲ. ಏನಪ್ಪಾ... ಎಲ್ಲರೂ ಯಾವ ಕಡೆ ಪ್ರಯಾಣ ಮಾಡುತ್ತಿದ್ದೀರಿ ಎಂದು ಕೇಳಿದೆವು. ನಮ್ಮ ಡಿಗ್ರಿಕಾಲೇಜುಗಳ ಪರೀಕ್ಷೆಗಳು ಮುಗಿದು ಎರಡು ತಿಂಗಳುಗಳ ಕಾಲ ರಜೆ ಇರುವುದರಿಂದ ನಾವೆಲ್ಲರೂ ಮುಂದಿನ ಊರಿಗೆ ಹೋಗಿ ಅಲ್ಲಿನ ಶುಭಕಾರ್ಯಗಳಾದ ಮದುವೆ ಗೃಹಪ್ರವೇಶಗಳಲ್ಲಿ ಅಡಿಗೆ ಮಾಡುವುದು ಊಟ ಬಡಿಸುವುದು ಶಾಮಿಯಾನ ಕಟ್ಟುವುದು ಕೆಲಸವನ್ನು ಮಾಡಿ ಅವರು ಕೊಡುವ ಹಣದಿಂದ ಮುಂದಿನ ವ್ಯಾಸಂಗಕ್ಕೆ ಕೂಡಿಟ್ಟುಕೊಳ್ಳುತ್ತೇವೆ ಎಂದರು. ಇನ್ನು ಕೆಲವರು ಬಟ್ಟೆ ಅಂಗಡಿಗಳಲ್ಲಿ ಕೆಲಸಕ್ಕೆ ಸೇರಿದ್ದೇವೆ ಎಂದರು ಅವರ ಮಾತು ಕೇಳಿ ಮತ್ತಷ್ಟು ಆನಂದವಾಯಿತು. ನಾವೆಲ್ಲಾ ರೈತರ ಮಕ್ಕಳು ಕಳೆದ ವರ್ಷ ಮಳೆ ಇಲ್ಲದೆ ಒಳ್ಳೆಯ ಬೆಳೆಯು ಇಲ್ಲದೆ ನಮ್ಮ ರೈತರ ಜೀವನ ಕಷ್ಟವಾಗಿರುವಾಗ ನಮ್ಮ ತಂದೆ ತಾಯಿಗೆ ನಮ್ಮಿಂದ ಕಷ್ಟವಾಗಬಾರದು ನಾವೇ ದುಡಿದು ನಮ್ಮ ಓದಿನ ಖರ್ಚನ್ನು ನಿಭಾಯಿಸುತ್ತೇವೆ ಎಂದರು. ಅಲ್ಲಿಗೆ ನಿಮ್ಮನ್ನು ಯಾರು ಕರೆದುಕೊಂಡು ಹೋಗುತ್ತಾರೆ ಎಂದು ಕೇಳಿದೆವು. ನಮ್ಮ ಊರಿನವರು ಕರೆದುಕೊಂಡು ಹೋಗಿ ಪರಿಚಯಿಸುತ್ತಾರೆ ಅವರೇ ನಮ್ಮ ಕೂಲಿಯನ್ನು ನಿಶ್ಚಯಿಸಿ ಕೊಡುತ್ತಾರೆ. ಬಂದ ಕೂಲಿಯಲ್ಲಿ ಸ್ವಲ್ಪದನ್ನು ಅಲ್ಲಿನ ಖರ್ಚಿಗೆ ಬಳಸಿ ಉಳಿದಿದ್ದನ್ನು ನಮ್ಮ ವಿದ್ಯಾಭ್ಯಾಸಕ್ಕೆ ಇಟ್ಟುಕೊಂಡು ಸ್ವಲ್ಪ ಹಣವನ್ನು ಮನೆಗೆ ಕೊಡುತ್ತೇವೆ ಎಂದರು. ಮಕ್ಕಳ ಮಾತನ್ನು ಕೇಳಿ ಮನಸ್ಸಿನಲ್ಲಿ ಶಹಬಾಷ್ ಎಂದು ಕೊಂಡೆವು. ಆತ್ಮೀಯರೇ ಇಂದಿಗೂ ನಮ್ಮ ಹಳ್ಳಿ ಮತ್ತು ಪಟ್ಟಣದಲ್ಲಿ ಕಷ್ಟದಲ್ಲಿ ಬೆಳೆದ ಮಕ್ಕಳು ತಮ್ಮ ಜೀವನ ಕಷ್ಟವಾಯಿತೆಂದು ಚಿಂತಿಸಲಿಲ್ಲ ಹಾಗೆಯೇ ಸುಮ್ಮನೆ ಕೂರುವುದೂ.. ಇಲ್ಲ ಬದಲಿಗೆ ಏನಾದರೂ ಒಂದು ಕೆಲಸವನ್ನುಹುಡುಕಿಕೊಂಡು ಮಾಡುತ್ತಾ ಶ್ರಮದಿಂದ ದುಡಿದು ತಿನ್ನಬೇಕೆಂದು ಬಯಸುತ್ತಾರೆ. ಇತ್ತ ಓದು ಬಿಡದೇ ತಾವೇ ದುಡಿದು ಓದುವುದು ಎಂದರೆ ಅದು ಇನ್ನು ಖುಷಿ ಇದಲ್ಲವೇ ವಿದ್ಯೆಗೆ ಸಲ್ಲುವ ಗೌರವ.ಹೀಗೆ ಕಷ್ಟದಿಂದ ಓದಿದ ಮಕ್ಕಳೇ ಇಂದು ದೊಡ್ಡ ದೊಡ್ಡ ಕೆಲಸದಲ್ಲಿದ್ದಾರೆ. ಕಷ್ಟದ ಜೀವನ ಬದುಕನ್ನು ಕಟ್ಟಿಕೊಡುತ್ತದೆ ಎಂಬ ಮಾತು ಸುಳ್ಳಲ್ಲ .ಈ ರೀತಿ ದುಡಿದು ತಿನ್ನುವ ಮಕ್ಕಳೇ ಮುಂದಿನ ಪೀಳಿಗೆಗೆ ಮಾದರಿಯಾಗುತ್ತಾರೆ ಮತ್ತು ಬೆಳಕಾಗುತ್ತಾರೆ.

**■ ಜಿ ಆರ್ ಬಸವರಾಜೇಶ್ವರಿ**
**ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ**

## ಮುಂಜಾನೆ ಮಾತು

ಕೆಲವೊಮ್ಮೆ ಇನ್ನೊಬ್ಬರು ಅದೆಂತಹ ಒಳ್ಳೆಯ ಮಾತುಗಳನ್ನಾಡಿದರೂ ನಿಮಗೆ ಹಿಡಿಸುವುದಿಲ್ಲ. ಕಾಟಾಚಾರದ ಉತ್ತರ ಕೊಟ್ಟು, ಹುಸಿ ನಗೆ ಬೀರಿ, ಅಥವಾ ಇನ್ನಾವುದೋ ನೆಪದಿಂದ ಅವರಿಂದ ದೂರವಿರಲು ಪ್ರಯತ್ನಿಸಿತ್ತೀರಿ. ಅದಕ್ಕೆ ಕಾರಣ ನಿಮ್ಮ ಭಾರವಾದ ಮನಸ್ಥಿತಿ. ಯವುದೋ ಒಂದು ಚಿಂತನೆಯಲ್ಲಿ ಮುಳುಗಿರುತ್ತೀರಿ ಮತ್ತು ಆ ಚಿಂತನೆಗೆ ಪರಿಹಾರ ಸಿಗದ ಗೊಂದಲದಲ್ಲಿರುತ್ತೀರಿ. ಯಾರಿಗೂ ಹೇಳಿಕೊಳ್ಳದೇ ಮನಸ್ಸಿನ ತೊಳಲಾಟದಲ್ಲಿ ಮುಳುಗಿರುತ್ತೀರಿ ಎಂದರ್ಥ.

ಇಂತಹ ಸಮಯದಲ್ಲಿ ಯಾರಾದರೂ ಮತ್ತೆ ಮತ್ತೆ ಮಾತನಾಡಿಸಲು ಯತ್ನಿಸಿದಾಗ ಸುಖಾ ಸುಮ್ಮನೆ ಅವರ ಮೇಲೆ ರೇಗಾಡುತ್ತೀರಿ. ಅವರೂ ಸಿಟ್ಟು ಮಾಡಿಕೊಂಡು ಹೋಗುತ್ತಾರೆ. ಈ ಪ್ರಸಂಗ ಇಷ್ಟಕ್ಕೆ ಮುಗಿಯುವುದಿಲ್ಲ. ನಿಮ್ಮ ತಲೆಯಲ್ಲಿರುವ ಚಿಂತನೆಗೆ ಪರಿಹಾರ ಸಿಗುವ ವರೆಗೆ ಅಥವಾ ಅದು ನಿಮ್ಮ ತಲೆಯಿಂದ ತಾನಾಗಿಯೇ ಹೋಗುವ ವರೆಗೆ ನಿಮಗೆ ಹಿತಕರವೆನಿಸುವುದಿಲ್ಲ.

ಇಂತಹ ಸಂದರ್ಭದಲ್ಲಿ ನೀವು ನಿಮ್ಮ ಮನಸ್ಸನ್ನು ಹೇಗಾದರೂ ಮಾಡಿ ಹತೋಟಿಯಲ್ಲಿಟ್ಟುಕೊಂಡು ನಿಮ್ಮ ತಲೆಯಲ್ಲಿರುವ ವಿಚಾರಗಳಿಗೆ ಸಂಬಂಧವಿಲ್ಲದ ವಿಷಯಗಳ ಬಗ್ಗೆ ಬೇರೆ ಗಮನ ಹರಿಸುವುದು, ಚರ್ಚಿಸುವುದು, ಓದುವುದು ಇತರ ಚಟುವಟಿಕೆಗಳಲ್ಲಿ ತೊಡಗಬೇಕು. ಅಥವಾ ಅತ್ಯಂತ ಆಪ್ತರಲ್ಲಿ ನಿಮ್ಮ ವಿಷಯ ಪ್ರಸ್ತಾಪಿಸಿ ಮನಸ್ಸು ಹಗುರ ಮಾಡಕೊಳ್ಳಬೇಕು.

ಯಾರು ಶ್ರದ್ಧಾಪೂರ್ವಕ ತಮ್ಮ ಕಾಯಕದಲ್ಲಿ ತೊಡಗಿರುವರೋ ಮತ್ತು ಪ್ರತಿನಿತ್ಯ ಪ್ರಣಾಯಾಮದಂತಹ ಯೋಗ, ಗುರುಧ್ಯಾನ, ದೇವರ ನಾಮಸ್ಮರಣೆ ಮಾಡುತ್ತಿರುತ್ತಾರೋ ಅವರಿಗೆ ಈ ಸಮಸ್ಯೆ ಬರುವುದೇ ಇಲ್ಲ. ಬಂದರೂ ಕೂಡಾ ಅವರು ಮನಸ್ಸನ್ನೇ ಆಳುವ ಅರಸನಾಗಿರುತ್ತಾನೆ. ಹಾಗಾಗಿ ಸಮಸ್ಯೆಗಳು ಸಮಸ್ಯೆ ಎನಿಸುವುದಿಲ್ಲ.

ದೈವತ್ವದ ಮನದಿಂದ ಮಾಡುವ ಕಾರ್ಯಗಳು ಸದಾ ಸಿದ್ಧಿಸುತ್ತವೆ.

**■ ಲಕುಮಿಸುತ ಸಾರವಾಡ, ಹೊಸಪೇಟೆ**

**ಕವಿ ಮನಸು**

## ಡ್ರಾಮ

ಬಂತು ಬಂತು ಮಳೆ ಬಂತು
ಬೆಳ್ಳಿ ಬಾಗಿಲು ತೆರೆದು
ಬಂಗಾರದ ಬಿಲ್ಲು ಹಿಡಿದು
ಶರವೇಗದಿ ಕಣ್ಣಲಿ ತೂರಿ ರೊಕ್ಕದ ಮಳೆ
ಸುರಿಸಿ

ಕೋಟ್ಯಾಧೀಶರ ಕೈಯೊಳು
ಪುಷ್ಪಕ ವಿಮಾನದಿ ಹಾರಿ
ನದಿಗಳ ನೀರಿಗೂ
ಮನೆಗಳ ನಲ್ಲಿಗೂ
ಚಂದ್ರನ ಮೈಗೂ
ಸೂರ್ಯನ ಶಾಖಕೂ

ಹೆಣ್ಣಿಗೂ ಗಂಡಿಗೂ
ಜಾತಿಗೂ ನೀತಿಗೂ
ಮತಗಳ ಭೀತಿಗೂ
ಧರ್ಮದ ಸಾವಿಗೂ
ಮೇಲು ಕೀಳು ಅಂತರ
ಮಾಡುತ ಸಂಚನು ಹೂಡುತ

ಚಾಕು ಚೂರಿ ತೂರುತ
ರಕ್ತದ ಹೊಳೆಗಳ ತುಂಬುತ
ಮಂದಿರ ಮಸೀದಿ ಜಗಳದಿ
ಕೇಸರಿ ಬುರ್ಖಾ ಎನ್ನುತ
ಬಲಿತ ಭಾರತ ಎಡವುತ
ಬಿದ್ದವರ ಬೆನ್ನಿಗೆ ಏರುತ

ಬಿತ್ತುವ ಕೈಗಳ ಕೊರೆಯುತ
ಸಾಲದ ಕೊರಳನು ತೂಗುತ
ಹೆಣಗಳ ರಾಶಿಯ ಹೊಟ್ಟುತ
ಹಣಗಳ ಚೀಲ ಹೊರುತ
ರಕ್ಕಸ ಹಾವಳಿ ಬಂತು

ಯಾರೇ ಮತವನು ಕೊಡಿ ಯಾರೇ
ಮತವನು ಬಿಡಿ
ಸರ್ಕಾರ ನಮ್ಮದೇ ಎನ್ನುತ
ಗೆಲುವನು ಬೀಗುತ
ಮೋಸದ ಜಾಲದಿ ಮೆರೆಯುತ
ಹಾಡು ಹಗಲೊಳು ದೋಚುತ
ಬಂಡವಾಳ ಹೂಡುತ ಬಂತು
ಡ್ರಾಮಾ ಕಂಪನಿ ಬಂತು

ಕಾಣುವ ಕಣ್ಣೊಳು ಕುಂತು
ಶ್ರಮಿಕರ ಕಣ್ಣೀರು ನಿಂತು
ಉಚಿತ ನಾಟಕ ಆಡುತ
ದೇಶದ ಆಟಕೆ ಬಂತು
ಪ್ರೇಮದ ಮಳೆ ಮಾಡನು ತಂತು
ಚಲಿಸುವ ಮೋಡದ ನಾಟಕ ತಂತು

– ಮುದೇನೂರು ಉಮಾಮಹೇಶ್ವರ

**ಸುತ್ತ ಮುತ್ತ**
**ಕುಂದು-ಕೊರತೆ**

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪುಸ್ತಕ ಎಂಬ ಆತ್ಮಸಖಿ

ನನ್ನ ತಂದೆಯನ್ನು ನೆನಪಿಸಿಕೊಂಡರೆ ಯಾವಾಗಲೂ ಕೈಯಲ್ಲಿ ಪುಸ್ತಕ ಹಿಡಿದುಕೊಂಡು ಓದುತ್ತಿರುವ ದೃಶ್ಯವೇ ಕಣ್ಣ ಮುಂದೆ ಬರುತ್ತದೆ. ನಾನು ನನ್ನ ಕೋಣೆಯಲ್ಲಿ ಓದುತ್ತಾ ಬರೆಯುತ್ತಾ ಕುಳಿತಾಗಲು ಕೂಡ ನನ್ನ ಪಕ್ಕದ ಮಂಚದಲ್ಲಿ ತುಸು ಓರೆಯಾಗಿ ಮಲಗಿ/ಕುಳಿತು ಪುಸ್ತಕವನ್ನು ಓದುತ್ತಿದ್ದರು ನನ್ನ ತಂದೆ. ಜೊತೆ ಜೊತೆಗೆ ಒಳ್ಳೆಯ ಪುಸ್ತಕಗಳನ್ನು ಲೇಖನಗಳನ್ನು ತೋರಿಸಿ ಓದಲು ಪ್ರೋತ್ಸಾಹಿಸುತ್ತಿದ್ದರು. ಅವರ ಈ ಹವ್ಯಾಸಗಳನ್ನು ನೋಡುತ್ತಲೇ ಬೆಳೆದ ನಮಗೆ ಪುಸ್ತಕ ಸಂಗಾತಿಯಾಗಿದ್ದು ಆಶ್ಚರ್ಯವೇನಲ್ಲ.

ಬಾಗಲಕೋಟೆಯ ನನ್ನ ದೊಡ್ಡಮ್ಮನ ಮನೆಯಲ್ಲಿ 1900ರ ಆದಿಯಲ್ಲಿ ಪ್ರಕಟವಾದ ಬಾಲಮಿತ್ರ ಪತ್ರಿಕೆಗಳನ್ನು ಗಂಟೊಂದರಲ್ಲಿ ಕಟ್ಟಿ ಅಟ್ಟದ ಮೇಲೆ ಇಟ್ಟಿದ್ದರು. ಪ್ರತಿ ಬಾರಿ ಬೇಸಿಗೆ ರಜೆಗೆ ಹೋದಾಗ ಅತ್ಯಂತ ಮಜಬೂತಾದ ಕಟ್ಟಿಗೆಯ ಹಲಗೆಗಳನ್ನು ಜೋಡಿಸಿ ಮಾಡಿದ ಆ ಸುವಿಶಾಲ ಅಟ್ಟದಲ್ಲಿ ಕುಳಿತುಕೊಂಡು ನಾನು ಮತ್ತು ನನ್ನಣ್ಣ ಒಂದೊಂದೇ ಪುಸ್ತಕಗಳನ್ನು ತೆಗೆದು ಕಥೆ ಓದುತ್ತಿದ್ದರೆ ಊಟ ನಿದ್ರೆಗಳ ಪರಿವೆಯೂ ಇರುತ್ತಿರಲಿಲ್ಲ. ಊಟದ ಸಮಯವಾದರೂ ಕೆಳಗಿಳಿದು ಬರದ ನಮ್ಮನ್ನು ನೋಡಿ ಮನೆಯವರೆಲ್ಲ ಹುಸಿ ಮುನಿಸು ತೋರುತ್ತಿದ್ದರು. ವೀಣಾ, ವಿಶ್ವ ಎಲ್ಲಿದ್ದಾರೆ ಎಂದು ಕೇಳಿದರೆ ಅಟ್ಟದ ಮೇಲೆ ಎಂಬಂತಹ ಸಿದ್ಧ ಉತ್ತರಗಳು ದೊರೆಯುತ್ತಿದ್ದವು.

ಒಂದನೇ ತರಗತಿಯಲ್ಲಿ ಇದ್ದಾಗ ಅ. ನ ಕೃಷ್ಣರಾಯರು ಬರೆದ ಕಣ್ಣೀರು ಕಾದಂಬರಿಯನ್ನು ಸಂಪೂರ್ಣವಾಗಿ ಓದಿದ್ದೆ. ಕೌಟುಂಬಿಕ ಕಾದಂಬರಿಯಾಗಿದ್ದ ಕಣ್ಣೀರು ಕಾದಂಬರಿಯ ಕಥೆ ಇಂದಿಗೂ ನನ್ನ ಮನಃಪಟಲದಲ್ಲಿ ಶಾಶ್ವತವಾಗಿ ಅಚ್ಚೊತ್ತಿದೆ. ಮುಂದೆ ಎಂ.ಕೆ.ಇಂದಿರಾ ಅವರ ಚಿದ್ವಿಲಾಸ ಕಾದಂಬರಿಯನ್ನು ಮೂರನೇ ತರಗತಿಯ ಸುಮಾರಿಗೆ ಓದಿದ್ದೆ.

ಆ ಕಾದಂಬರಿಯ "ಮಾನವನ ಜೀವನ ಕಲ್ಪನಾ ವಿಲಾಸ ನಿಸರ್ಗದ ಪ್ರತಿಕ್ರಿಯೆ ಚಿದ್ವಿಲಾಸ" ಎಂಬ ನುಡಿಗಳು ಇಂದಿಗೂ ಬಾಯಿಪಾಠವಾಗಿವೆ. ನನ್ನೆಲ್ಲಾ ಓದುಗಳಿಗೆ ಸಂಗಾತಿ ನನ್ನ ಸೋದರಿಗಿಂತಲೂ ಹೆಚ್ಚಾದ ಸ್ನೇಹಿತೆ ಸುನಂದ. ನನಗಿಂತ ಕೇವಲ ಒಂದೆರಡು ವರ್ಷ ಹಿರಿಯಳಾದ ಸುನ್ನಕ್ಕ ಮತ್ತು ನಾನು ಆ ಚಿಕ್ಕ ವಯಸ್ಸಿನಲ್ಲಿ ಕಾದಂಬರಿಗಳ ಕುರಿತು ಚರ್ಚಿಸುತ್ತಿದ್ದೆವು ಎಂದರೆ ನಮ್ಮ ಓದಿನ ಹುಚ್ಚು ಎಷ್ಟಿತ್ತು ಎಂಬುದರ ಅಂದಾಜು ದೊರೆಯಬಹುದು. ರಜಾ ದಿನಗಳಲ್ಲಿ ಇಬ್ಬರೂ ಕುಳಿತು ಇಲ್ಲವೇ ಮಂಚದ ಮೇಲೆ ಮಲಗಿಕೊಂಡು ಒಂದೇ ಪುಸ್ತಕವನ್ನು ಜೊತೆಯಾಗಿ ಓದುತ್ತಿದ್ದ ನೆನಪು ಇನ್ನೂ ಹಚ್ಚ ಹಸಿರಾಗಿದೆ.

ಮುಂದೆ ಶಾಲೆಗೆ ಹೋದಾಗಲೂ ಶಾಲೆಯ ಪುಸ್ತಕಗಳ ಜೊತೆ ಜೊತೆಗೆ ಕಥೆ ಪುಸ್ತಕಗಳು ಗಳನ್ನು ಕೂಡ ಕೊಂಡೊಯ್ದು ವಿರಾಮದ ಅವಧಿಯಲ್ಲಿ ಓದುತ್ತಿದ್ದೆ. ಚಂದಮಾಮ, ಬಾಲಮಿತ್ರ, ಚಂಪಕ ಪುಸ್ತಕಗಳು ನಮ್ಮ ಬಾಲ್ಯದ ನೆಚ್ಚಿನ ಸಂಗಾತಿಗಳಾಗಿದ್ದವು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮನೆಯಲ್ಲಿ ನನ್ನ ತಂದೆ ತರಂಗ, ಸುಧಾ ವಾರಪತ್ರಿಕೆಗಳನ್ನು, ಮಯೂರ ಮತ್ತು ತುಷಾರ ಮಾಸ ಪತ್ರಿಕೆಗಳನ್ನು, ಪ್ರಜಾವಾಣಿ ದಿನಪತ್ರಿಕೆಯನ್ನು ಕಡ್ಡಾಯವಾಗಿ ತರಿಸುತ್ತಿದ್ದರು. ಆಗಿನ ಸಮಯದಲ್ಲಿ ಮನೆಯಲ್ಲಿ ಕರೆಂಟ್ ಹೋಗಿ ವಿದ್ಯುತ್ ದೀಪ ಕೈ ಕೊಟ್ಟಾಗ ನಾನು ಮತ್ತು ನನ್ನಪ್ಪ ಕಂದೀಲಿನ ದೀಪ, ಇಲ್ಲವೇ ಮೇಣದ ದೀಪದ ಅಡಿಯಲ್ಲಿ ಕುಳಿತು ಮಯೂರ ಮತ್ತು ತುಷಾರ ಪುಸ್ತಕಗಳನ್ನು ಓದುತ್ತಿದ್ದೆವು. ಕರೆಂಟ್ ಹೋಗುವುದು ನಮ್ಮ ಪಾಲಿಗೆ ಶಾಲಾ ಓದು ಬರಹಗಳ ನಡುವೆ ವಿರಾಮದ ಸಮಯದಂತೆ ತೋರುತ್ತಿತ್ತು.

ಮುಂದೆ 7ನೇ ತರಗತಿಯ ರಜಾ ದಿನಗಳಲ್ಲಿ ಪಕ್ಕದ ಮನೆಯ ಹಿರಿಯ ಸ್ನೇಹಿತೆಯೊಂದಿಗೆ ಲೈಬ್ರರಿಯಲ್ಲಿ ಮೆಂಬರ್ಶಿಪ್ ಮಾಡಿಸಿ ಪುಸ್ತಕಗಳನ್ನು ತಂದು ಓದಲು ಆರಂಭಿಸಿದೆ. ಆ ಸಮಯದಲ್ಲಿ ಓದಿದ ಕಾದಂಬರಿಗಳಲ್ಲಿ ಸಾಮಾಜಿಕ, ಪತ್ತೆದಾರಿ, ಥ್ರಿಲ್ಲರ್, ಪೌರಾಣಿಕ ಕಾದಂಬರಿಗಳು ಹೆಚ್ಚು. ಇದರ ಜೊತೆ ಜೊತೆಗೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಧಾರಾವಾಹಿಗಳನ್ನು ಓದುವ ಮೂಲಕ ನಮ್ಮ ಓದಿನ ಚಪಲವನ್ನು ತೀರಿಸಿಕೊಳ್ಳುತ್ತಿದ್ದೆವು. ಅದೊಂದು ತೀರದ ದಾಹ. ದಣಿವರಿಯದ ಕಾರ್ಯ ಚಟುವಟಿಕೆ ನಮ್ಮ ಪಾಲಿಗೆ. ನನ್ನನ್ನು ರಜೆಗೆ ತಮ್ಮ ಊರಿಗೆ ಕರೆದುಕೊಂಡು ಹೋಗಬೇಕಾದರೆ ನನ್ನ (ದೊಡ್ಡಮ್ಮನ ಸೊಸೆ) ಅತ್ತಿಗೆ ತಾವು ವಾಸಿಸುತ್ತಿದ್ದ ಹೊಸಪೇಟೆಯಲ್ಲಿ ಲೈಬ್ರರಿಗೆ ಮೆಂಬರ್ಶಿಪ್ ಮಾಡಿಸಿ ಕೊಡುವುದಾಗಿ ಆಮಿಷ ಒಡ್ಡಿ ಕರೆದೊಯ್ಯುತ್ತಿದ್ದರು! ಮತ್ತು ಮಾಡಿಸಿ ಕೊಡುತ್ತಿದ್ದರು ಕೂಡ(ಇಲ್ಲದಿದ್ದರೆ ಅವರ ಮನೆಯಲ್ಲಿ ಉಳಿದುಕೊಳ್ಳುತ್ತಿರಲಿಲ್ಲ ಎಂಬ ಭಯದಿಂದ!). ಯಾರಾದರೂ ಸಂಬಂಧಿಗಳ ಮನೆಗೆ ಹೋದಾಗ ಅಲ್ಲಿ ನಾನು ನೋಡುತ್ತಿದ್ದದ್ದು ಪುಸ್ತಕಗಳನ್ನೇ. ಹಾಗೇನಾದರೂ ಪುಸ್ತಕ ದೊರಕಿದಲ್ಲಿ ಯಾರೂ ನನ್ನ ಏಕಾಂತ ಓದಿಗೆ ಧಕ್ಕೆ ಬರದಂತಹ ಆ ಮನೆಯ ಒಂದು ನಿಶ್ಯಬ್ದ ಮೂಲೆ, ಇಲ್ಲವೇ ಅಟ್ಟ ಇಲ್ಲವೇ ತಾರಸಿಯ ಮೆಟ್ಟಿಲುಗಳ ಮೇಲೆ ಕುಳಿತು ಪುಸ್ತಕಗಳನ್ನು ಓದಿ ಮುಗಿಸುತ್ತಿದ್ದೆ. ನನ್ನ ರೀಡೆಬಲಿಟಿ ಕೂಡ ಬಹಳ ಉತ್ತಮವಾಗಿತ್ತು. ಸುಮಾರು ನಾನೂರಕ್ಕೂ ಹೆಚ್ಚು ಪುಟಗಳ ಒಂದು ಪುಸ್ತಕವನ್ನು ಕೇವಲ ಕೆಲವೇ ಗಂಟೆಗಳ ಓದುವಿಕೆಯಲ್ಲಿ ಮುಗಿಸಿರುತ್ತಿದ್ದೆ. ಯಾವುದೇ ಗುರುತರ ಜವಾಬ್ದಾರಿಗಳಿಲ್ಲದ ಆ ದಿನಗಳ ಓದುವಿಕೆಯ ಶೇಕಡಾ 25ರಷ್ಟು ಕೂಡ ಈಗ ಓದಲು ಸಾಧ್ಯವಾಗುತ್ತಿಲ್ಲ! ಎಂಬುದು ವಿಷಾದನೀಯ. ಆದರೆ ಅದೆಷ್ಟೇ ಕೆಲಸದ ಒತ್ತಡಗಳ ನಡುವೆಯೂ ಓದುವುದನ್ನು ಬಿಡುವುದಿಲ್ಲ ಎಂಬುದು ಅಷ್ಟೇ ಖುಷಿ ತರುವ ವಿಷಯ.

ಅಷ್ಟೇನೂ ಎಲೆಕ್ಟ್ರಾನಿಕ್ ಮಾಧ್ಯಮಗಳ ಹಾವಳಿ ಇಲ್ಲದ ಕಾಲದಲ್ಲಿ ನಾವು ಓದುತ್ತಿದ್ದ ಪುಸ್ತಕಗಳಲ್ಲಿನ ಇಷ್ಟವಾದ ವಾಕ್ಯಗಳನ್ನು, ಕೊಟೇಶನ್ ಗಳನ್ನು



ಶಾಯರಿಗಳನ್ನು ಬೇರೊಂದು ಪುಸ್ತಕದಲ್ಲಿ ಬರೆದು ಎತ್ತಿಟ್ಟು ಕೊಳ್ಳುತ್ತಿದ್ದ ನನ್ನ ಬಳಿ ಇಂದಿಗೂ 15ಕ್ಕೂ ಹೆಚ್ಚು ಡೈರಿಗಳು ಹಾಗೆಯೇ ಇವೆ. ಯಾವಾಗಲಾದರೂ ಪುರುಸೊತ್ತಾದಾಗ ಅವುಗಳನ್ನು ತಿರುವಿ ಹಾಕುವಾಗ ಬಾಲ್ಯದ ಸವಿ ನೆನಪುಗಳು,ಓದಿನ ಕುರಿತಾದ ನನ್ನ ಅಗಾಧ ಹಂಬಲ ನೆನಪಾಗಿ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅದೆಷ್ಟು ಆಸಕ್ತಿ ಇತ್ತು ಎಂದು ಯೋಚಿಸಿದರೆ ಖುದ್ದು ನನಗೆ ಆಶ್ಚರ್ಯ ವಾಗುವುದಲ್ಲದೆ ಹೆಮ್ಮೆ ಕೂಡ ಎನ್ನಿಸುತ್ತದೆ.

ಕೆ.ಎಸ್. ನಾರಾಯಣ ಆಚಾರ್ಯರ ಪೌರಾಣಿಕ ಕಥೆಗಳ ಧಾರಾವಾಹಿಗಳು, ಸುದರ್ಶನ ದೇಸಾಯಿ, ಯಂಡಮೂರಿ ವೀರೇಂದ್ರನಾಥ, ರಾಜಾ ಚೆಲ್ಲೂರು, ಸಾಯಿಸುತೆ, ಅನುಪಮಾ ನಿರಂಜನ್, ಎಮ್ ಕೆ ಇಂದಿರಾ, ವಿದ್ಯುಲ್ಲತ, ಡಾ ಕೆ. ಎ.ಅಶೋಕ್ ಪೈ ಅವರ ಮನೋವೈಜ್ಞಾನಿಕ ಧಾರಾವಾಹಿಗಳು ಮತ್ತು ಪುಸ್ತಕಗಳು ಹೀಗೆ ಹತ್ತು ಹಲವು ಜನರ ಪುಸ್ತಕಗಳನ್ನು ಧಾರಾವಾಹಿ ರೂಪದಲ್ಲಿ ವರ್ಷಾನುಗಟ್ಟಲೆ ಓದಿದ್ದು ನನ್ನ ಉಳಿದೆಲ್ಲ ಓದದ ಸ್ನೇಹಿತರಿಗೆ ಹೋಲಿಸಿದರೆ ನಮಗೆ ತುಸು ಪ್ರಪಂಚಜ್ಞಾನ ಹೆಚ್ಚು ಇತ್ತು ಎಂದರೆ ತಪ್ಪಿಲ್ಲ. ಜಾತಿ, ಧರ್ಮ, ಪಂಥ, ಸಾಮಾಜಿಕ ಆಚರಣೆಗಳು, ಹೆಣ್ಣೊಬ್ಬಳ ಮಾನಸಿಕ ತಳಮಳಗಳು, ಆಸೆ ಆಕಾಂಕ್ಷೆಗಳು, ತುಡಿತ ಮಿಡಿತಗಳು, ಪ್ರೀತಿ ಪ್ರೇಮ ಪ್ರಣಯ, ಕೌಟುಂಬಿಕ ತೊಂದರೆಗಳು ನೋವು ಸುಖ ಸಂಸಾರದ ಸಿದ್ಧಮಾದರಿಗಳು ಹೊಂದಾಣಿಕೆ ಮಾಡಿಕೊಳ್ಳುವ ವ್ಯಕ್ತಿ ಮತ್ತು ವ್ಯಕ್ತಿತ್ವಗಳು ಹೀಗೆ ಬದುಕಿನ ಎಲ್ಲ ಮಜಲುಗಳ ಪರಿಚಯವಾಗುತ್ತಿತ್ತು ಪ್ರೀತಿ ಪ್ರೇಮ ಭಗ್ನವಾದಾಗ ಉಂಟಾಗುವ ನೋವು, ನಿರಾಶೆ ಹೊಂದಿದಾಗ ತಮ್ಮನ್ನು ತಾವು ಸಂಭಾಳಿಸಿಕೊಂಡು ಮತ್ತೆ ಜೀವನ್ಮುಖಿಯಾಗಿ ಬದುಕು ನಡೆಸುವ ವಿವಿಧ ಜನರ ಚಿತ್ರಣಗಳು, ಆತ್ಮಹತ್ಯೆ ಮತ್ತು ಆಕಸ್ಮಿಕ ಸಾವುಗಳು ಒಂದು ಮನೆ, ಒಂದು ಸಮುದಾಯ, ಒಂದು ಊರಿನ ಮೇಲೆ ಬೀರುವ ಪರಿಣಾಮಗಳು ಹೀಗೆ ನೂರಾರು ವಿಷಯಗಳನ್ನು ಒಳಗೊಂಡಿರುತ್ತಿದ್ದ ವೈವಿಧ್ಯಮಯ ಪುಸ್ತಕಗಳನ್ನು, ಕಾದಂಬರಿಗಳನ್ನು ಧಾರಾವಾಹಿಗಳನ್ನು ಓದುವುದರ ಮೂಲಕ ವಿವಿಧ ಜನರ ವಿವಿಧ ಭಾವಗಳ ಅಭಿವ್ಯಕ್ತಿಯ ಅರಿವಾಗುತ್ತಿತ್ತು.

ಯಂಡಮೂರಿ ವೀರೇಂದ್ರನಾಥರ ದುಡ್ಡು ವರ್ಸಸ್ ದುಡ್ಡು, ಕಪ್ಪಂಚು ಬಿಳಿ ಸೀರೆ, ಸ್ಟುವರ್ಟುಪುರಂ ಪೊಲೀಸ್ ಸ್ಟೇಷನ್, ತ್ರಿನೇತ್ರ ಮುಂತಾದ ಕಾದಂಬರಿಗಳು ಧಾರಾವಾಹಿ ರೂಪದಲ್ಲಿ ನಮಗೆ ದೊರೆತಿದ್ದವು. ಆಧುನಿಕ ವ್ಯಾಪಾರಿ ಜಗತ್ತು ಅಲ್ಲಿ ಹೂಡುವ ತಂತ್ರ ಪ್ರತಿ ತಂತ್ರಗಳು, ಜೀವನದಲ್ಲಿ ದುಡ್ಡಿನ ಮಹತ್ವ, ಭಾವನಾತ್ಮಕ ವಿಷಯಗಳ ಜೊತೆ ಜೊತೆಗೆ ಲೌಕಿಕ ವಾಸ್ತವ ವಿಷಯಗಳು ಮೇಳಯಿಸುವಿಕೆಯನ್ನು ನಮಗೆ ಪರಿಚಯಿಸಿದ್ದು ಯಂಡಮೂರಿ ವೀರೇಂದ್ರನಾಥ್. ಶೋಭಾ ಡೇ ಎಂಬ ಇಂಗ್ಲಿಷ್ ಮತ್ತು ಹಿಂದಿಯ ಲೇಖಕಿ ಪರಿಚಯವಾಗಿದ್ದು ತರಂಗ ಪತ್ರಿಕೆಯ ಮೂಲಕ. ತುಸು ಬೋಲ್ಡ್ ಎನಿಸುವ ಆಧುನಿಕ ಜಗತ್ತಿನ ಕುರಿತ ಧಾರಾವಾಹಿಗಳು, ಸಂತೋಷ್ ಕುಮಾರ್ ಗುಲ್ವಾಡಿಯವರ ಅಂತರಂಗ ಬಹಿರಂಗ, ಹಾ.ಮಾ. ನಾಯಕ್ ಅವರ ಅಂಕಣ ಬರಹಗಳು. ಸುನಂದನಮ್ಮನವರ ರಾಶಿಯವರ ಹಾಸ್ಯ ರಸಾಯನಗಳು ಹೀಗೆ ಹತ್ತು ಹಲವು ವಿಷಯಗಳನ್ನು ಓದಿದ ಅನುಭವಗಳು ಕಟ್ಟಿಕೊಟ್ಟ ಬುತ್ತಿ ಜೀವನದ ಕೊನೆಯವರೆಗೂ ಇರುತ್ತವೆ....ಒಂದೇ ಎರಡೇ ಈ ಕಥೆ, ಕವನ,ಕಾದಂಬರಿಗಳು ನಮಗೆ ವಿಭಿನ್ನ ಸಂಸ್ಕೃತಿಯ ವೈವಿಧ್ಯಮಯ ವಿಷಯಗಳನ್ನು, ಬದುಕಿನ ಹಲವಾರು ಪಾಠಗಳನ್ನು ಕಲಿಸಿಕೊಟ್ಟವು ಎಂದರೆ ತಪ್ಪಿಲ್ಲ.

ಬದುಕು ಮಗ್ಗಲು ಹೊರಳಿಸಿದಂತೆಯೇ ಆಸಕ್ತಿಗಳು ಭಿನ್ನವಾಗಿ ಪ್ರೀತಿ ಪ್ರೇಮ ಪ್ರಣಯದ ಕಾದಂಬರಿಗಳಿಗಿಂತ ಹೆಚ್ಚು ಆಪ್ತವಾದದ್ದು ರವಿ ಬೆಳಗೆರೆಯವರ ಪುಸ್ತಕಗಳು. ನಾವು ನೋಡದ, ಕೇಳದ ಹತ್ತು ಹಲವಾರು ವಿಭಿನ್ನ, ಕುತೂಹಲಕಾರಿ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವ ಮೂಲಕ ನಮ್ಮ ಜ್ಞಾನದ ಜಗತ್ತಿನ ವಿಕಾಸಕ್ಕೆ ಕಾರಣವಾದವರು. ಇದೇ ಸಮಯದಲ್ಲಿ ಓದಿದ ಯಂಡಮೂರಿ ವೀರೇಂದ್ರನಾಥ ಅವರ ವಿಜಯಕ್ಕೆ 5 ಮೆಟ್ಟಿಲು ಪುಸ್ತಕ ನನ್ನ ಕೈಗೆ ದೊರೆತು ನನ್ನ ಬದುಕನ್ನು ವಿಶಿಷ್ಟವಾಗಿ ರೂಪಿಸಿಕೊಳ್ಳಲು, ವಿಶೇಷ ಕಾರ್ಯ ಸೂಚಿಗಳನ್ನು ಹಾಕಿಕೊಳ್ಳಲು ಅನುಕೂಲವಾಗಿತ್ತು ಈ ಪುಸ್ತಕ ನೀಡಿದ ಜ್ಞಾನದಿಂದ. ಮುಂದೆ ನಾನ್ ಫಿಕ್ಷನ್ ಗಳತ್ತ ನನ್ನ ಒಲವು ಹರಿಯಿತು.

ಮದುವೆಯಾಗಿ ಬಂದ ಮೇಲಂತೂ ನನ್ನ ಆಸಕ್ತಿಯನ್ನು ಗಮನಿಸಿದ ನನ್ನ ಮಾವನವರು ಕರ್ಮವೀರ, ತರಂಗ, ಜೀವನಾಡಿ ಮುಂತಾದ ಪತ್ರಿಕೆಗಳನ್ನು ತರಿಸಲಾರಂಭಿಸಿದರು. ಇದರ ಜೊತೆಗೆ ಮನೆಗೆ ಬರುತ್ತಿದ್ದ ಐದಾರು ಪತ್ರಿಕೆಗಳನ್ನು ಓದಲೇಬೇಕೆಂಬ ಹಠದಿಂದ ಓದಲಾರಂಭಿಸಿದೆ. ಪತ್ರಿಕೆಯ ಸಂಪಾದಕೀಯ, ಒಳ ಪುಟಗಳಲ್ಲಿನ ವಿವಿಧ ಬಗೆಯ ಲೇಖನಗಳು, ವ್ಯಕ್ತಿ ಚಿತ್ರಗಳು, ಸ್ವಾರಸ್ಯಕರ ವಿಷಯಗಳು ಮುಂತಾದ ಹತ್ತು ಹಲವು ವಿಷಯಗಳನ್ನು ಎಷ್ಟೋ ಬಾರಿ ಬೇಸರವಾದರೂ ಅರಿತುಕೊಳ್ಳಲೇಬೇಕು ಎಂಬ ಆಸಕ್ತಿಯಿಂದ ಓದಿದ್ದನ್ನು ನೆನೆದರೆ ಇಂದು ಮುಖದಲ್ಲಿ ಮುಗುಳ್ನಗೆ ಮೂಡುತ್ತದೆ.

ಆತ್ಮಕಥನಗಳಲ್ಲಿ ಮೂಡಿ ಬರುವ ಬಾಲ್ಯ, ಯೌವನ, ಸಾಧನೆ, ಸಾಧನೆಯ ಹಿಂದಿರುವ ಬಡತನದ,ನೋವಿನ, ಸಂತಸದ ಕ್ಷಣಗಳು ಆಯಾ ತಲೆಮಾರಿನ ವಿವಿಧ ಚಿತ್ರಣಗಳು, ಬದುಕಿನ ರೀತಿ ನೀತಿಗಳು, ಭಾಷೆ ಶೈಲಿ ಮನದ ಮೂಲೆಯಲ್ಲಿ ಶಾಶ್ವತವಾಗಿ ನೆಲೆಯೂರುತ್ತವೆ. ವ್ಯಾಸರಾಯ ಬಲ್ಲಾಳರ ಕಾದಂಬರಿಗಳಂತೂ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಭಾರತವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತವೆ. ಇಂದಿಗೂ ನೋಡಿರದ ಕಾಣದ ಮುಂಬೈ ಶಹರವನ್ನು ವ್ಯಾಸರಾಯ ಬಲ್ಲಾಳರು ಮತ್ತು ಜಯಂತ್ ಕಾಯ್ಕಿಣಿ ಅವರ ಕೃತಿಗಳಲ್ಲಿ ಇಂಚಿಂಚು ಬಲ್ಲೆವು ಎಂದರೆ ಆಶ್ಚರ್ಯವೇನಿಲ್ಲ. ಕೆ.ಟಿ. ಗಟ್ಟಿಯವರು ಮತ್ತು ಎಸ್ ಎಲ್ ಭೈರಪ್ಪನವರ ಕಾದಂಬರಿಗಳಂತೂ ನಮ್ಮ ಚಿಂತನೆಗಳನ್ನು ಮತ್ತೊಂದು ನೆಲೆಗೆ ಕರೆದೊಯ್ಯುತ್ತವೆ. ಇದರ ಜೊತೆ ಜೊತೆಗೆ ಬಡತನದ ಹಿನ್ನೆಲೆಯಲ್ಲಿಯೂ ಸಾಧಿಸಬೇಕೆಂಬ ಛಲ ಹೊತ್ತು ಅತ್ಯಂತ ಹಿಂದುಳಿದ ಕುಟುಂಬದಿಂದ ಬಂದು ಮಹತ್ತರ ಸ್ಥಾನಗಳನ್ನು ಗಳಿಸಿದ ವ್ಯಕ್ತಿಗಳ ವ್ಯಕ್ತಿ ಚಿತ್ರಣ ಸ್ಫೂರ್ತಿಯನ್ನು ತಂದಿವೆ.

ಪತ್ರಿಕೆಗಳಲ್ಲಿನ ಮೊದಲ ಪುಟದಿಂದ ಕೊನೆಯ ಪುಟದವರೆಗೂ ಆಸಕ್ತಿ ಇರದಿದ್ದರೂ ಕೆಲವೊಮ್ಮೆ ಓದಿದ ಲೇಖನಗಳು ಇಂದು ನನಗೆ ಎಷ್ಟೋ ವಿಷಯಗಳ ಕುರಿತು ಮಾಹಿತಿ ಮತ್ತು ಜ್ಞಾನವನ್ನು ತುಂಬಿಕೊಟ್ಟಿವೆ. ಪುಸ್ತಕಗಳ ಮೂಲಕ ನಮಗೆ ನಮ್ಮ ಸಂಸ್ಕೃತಿ, ಸಂಸ್ಕಾರ ಮಾನವೀಯ ಮೌಲ್ಯಗಳ ಜೊತೆ ಜೊತೆಗೆ ವಿಶ್ವ ಪ್ರೇಮವನ್ನು ಸಹಿಷ್ಣುತಾ ಭಾವವನ್ನು ತಂದು ಕೊಟ್ಟಿವೆ ಎಂದರೆ ತಪ್ಪಲ್ಲ. ಪುಸ್ತಕಗಳು ನಮಗೆ ವಿಭಿನ್ನ ಸ್ವಭಾವದ ಜನರ ಪರಿಚಯಗಳನ್ನು ಮಾಡಿ ಕೊಟ್ಟಿದೆ. ಪುಸ್ತಕಗಳು ನಮಗೆ ಸರಿ ತಪ್ಪುಗಳ, ನ್ಯಾಯ ಅನ್ಯಾಯಗಳ ಕುರಿತು ವಿವೇಚನೆ ನೀಡಿವೆ.

ದಶಕಗಳ ಹಿಂದೆ ಜಿಎಸ್ ಪುಟ್ಟಸ್ವಾಮಯ್ಯನ ವರು ಬರೆದ ಆರು ಸರಣಿ ಕಾದಂಬರಿಗಳು ನಾನು ವಚನ ಸಾಹಿತ್ಯದತ್ತ ಆಕರ್ಷಿಸಲ್ಪಟ್ಟ ಪರಿಣಾಮವಾಗಿ ಹಲವಾರು ಕಾದಂಬರಿಗಳನ್ನು ವಚನಕಾರರು ಮತ್ತು ಅವರ ಜೀವನ ಚರಿತ್ರೆ,ಕಲ್ಯಾಣದ ರಾಜಕೀಯ ಚಾಲುಕ್ಯ ಮತ್ತು ಕಳಚೂರಿ ವಂಶಗಳ ಕೌಟುಂಬಿಕ ರಾಜಕಾರಣ ಅಲ್ಲಿನ ಜನಜೀವನ ವಚನ ಚಳುವಳಿ, ಮುಂದೆ ಕರ್ತಾರನ ಕಮ್ಮಟ ಮತ್ತು ಅಳಿವಿನಿಂದ ಉಳಿವಿಯೆಡೆಗೆ ಮುಂತಾದ ಕೃತಿಗಳು ನನಗೆ ಆ ಕಾಲದ ರಾಜಕೀಯ ಸಾಂಸ್ಕೃತಿಕ ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯಲು ಅವಕಾಶ ನೀಡಿದವು. ನಮ್ಮ ಮನೆಯ ಹತ್ತಿರದಲ್ಲಿಯೇ ಇರುವ ಕಾಲೇಜಿನ ಗ್ರಂಥಾಲಯಗಳಿಂದಲೂ ಪುಸ್ತಕಗಳನ್ನು ಎರವಲು ತಂದು ಓದುತ್ತಿದ್ದ ನಾನು ಎಷ್ಟೋ ಬಾರಿ ನನ್ನ ಮನೆಯ ಅನಕ್ಷರಸ್ಥ ಕೆಲಸದ ವ್ಯಕ್ತಿ ಗ್ರಂಥಾಲಯಕ್ಕೆ ಹೋಗಿ ತಂದು ಕೊಡುವ ವಿವಿಧ ಪುಸ್ತಕಗಳನ್ನು ಓದುತ್ತಿದ್ದೆ.

ಪುಸ್ತಕಗಳು ಮತ್ತು ಚಲನಚಿತ್ರಗಳು ನಮ್ಮ ಜೀವನದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ನಾವು ಓದುವ ಪುಸ್ತಕ ಮತ್ತು ನಾವು ನೋಡುವ ಚಲನಚಿತ್ರಗಳ ವ್ಯಕ್ತಿಗಳೇ ನಾವಾಗಿ ಆ ಪಾತ್ರಗಳನ್ನು ನಮ್ಮಲ್ಲಿ ನಾವು ಆವಾಹಿಸಿಕೊಂಡುಬಿಡುತ್ತೇವೆ.

ಈ ಶತಮಾನದ ಮಕ್ಕಳಿಗಿಂತ ನಾವು ಬಲು ಭಾಗ್ಯಶಾಲಿಗಳು. ನಮ್ಮ ಚಿತ್ತವನ್ನು ಕೆಡಿಸುವ, ಸಮಯವನ್ನು ಹಾಳು ಮಾಡುವ, ತಪ್ಪು ಸರಿಗಳ ಪರಿವೇ ಇಲ್ಲದೆ ಸುದ್ದಿಗಳ ರಾಶಿಯನ್ನೇ ಹೊತ್ತು ತರುವ ಅಂತರ್ಜಾಲ, ಲ್ಯಾಪ್ ಟಾಪ್, ದೂರದರ್ಶನದ ನೂರಾರು ಚಾನಲ್ಗಳು, ಕೂತಲ್ಲಿಂದ ಕಾಲ್ಕೀಳದಂತೆ ನಮ್ಮನ್ನು ಒರಗು ಕುರ್ಚಿಗೆ ಫೆವಿಕಾಲ್ ಹಾಕಿದಂತೆ ಕೂಡಿಸಿರುವ ಮೊಬೈಲ್ ಫೋನ್ ಗಳು ನಮ್ಮ ಓದುವ ಹವ್ಯಾಸವನ್ನು ನುಂಗಿ ಹಾಕಿವೆ. ಆಗ ಯಾವುದೋ ಒಂದು ವಿಷಯವನ್ನು ಹುಡುಕುವ ಸಲುವಾಗಿ ಹಲವಾರು ಪುಸ್ತಕಗಳನ್ನು ತಿರುವಿ ಹಾಕುತ್ತಿದ್ದ ನಾವುಗಳು ಇಂದು ನಿರ್ದಿಷ್ಟ ವಿಷಯದ ವಿವರ ಪಡೆಯಲು ಗೂಗಲ್ ಅಮ್ಮನ ಮೊರೆ ಹೋಗಿದ್ದೇವೆ. ಆಕೆಯೋ ಮಹಾತಾಯಿ.... ನಾವು ಒಂದು ಕೇಳಿದರೆ ಹಲವು ಹನ್ನೊಂದನ್ನು ಬಡಿಸುವಾಕೆ. ಹೀಗಾಗಿ ಪುಸ್ತಕ ಎಂಬುದು ಇಂದಿನ ತಲೆಮಾರಿನ ಬಹುತೇಕ ಜನರಿಗೆ ಅಲರ್ಜಿ ಅಂತಾಗಿದೆ. ಅಕಸ್ಮಾತ್ ಯಾರಾದ್ರೂ ಹೆಚ್ಚು ಪುಸ್ತಕವನ್ನು ಓದಿದರೆ ಓದಿ ಕೆಟ್ಟ ಕೂಚು ಭಟ್ಟ, ಓದು ಒಕ್ಕಾಲು ಬುದ್ಧಿ ಮುಕ್ಕಾಲು ಎಂದು ತಮಾಷೆ ಮಾಡಿ ಅವರನ್ನು ಹೀಗಳೆಯುತ್ತಾರೆ. ಗುಲ್ದು, ಬುಕವಾರ್ಮ್ ಎಂದೆಲ್ಲಾ ಹಂಗಿಸುತ್ತಾರೆ.

ಆದರೆ ನಿಜವಾದ ಪುಸ್ತಕ ಪ್ರೇಮಿಗಳು ಬದಲಾದ ಸನ್ನಿವೇಶದಲ್ಲಿಯೂ ಕೂಡ ವಿವಿಧ ಮಾಧ್ಯಮಗಳ ಮೂಲಕ ದೊರೆಯುವ ಕಥೆ, ಕವನ, ಕಾದಂಬರಿಗಳನ್ನು ಇಂದಿಗೂ ಓದುತ್ತಾರೆ. ಫೇಸ್ಬುಕ್, ವಾಟ್ಸಪ್ ಗ್ರೂಪ್ ಗಳಲ್ಲಿ ಸಾಹಿತ್ಯವನ್ನು ಓದುವ ಅವುಗಳನ್ನು ಪ್ರೋತ್ಸಾಹಿಸುವ ಸಾವಿರಾರು ಗುಂಪುಗಳು ಇವೆ. ನಿರಂತರವಾಗಿ ಚಟುವಟಿಕೆಗಳನ್ನು ನಡೆಸುವ ವಿವಿಧ ಗ್ರೂಪ್ಗಳ ಅಡ್ಮಿನ್ ಗಳು ಪ್ರೋತ್ಸಾಹದಾಯಕ ಮಾತುಗಳನ್ನು ಆಡುತ್ತಾರೆ ಮತ್ತು ಲೇಖನ ಕವನ ಕಥೆಗಳನ್ನು ಬರೆಯಲು ವಿವಿಧ ರೀತಿಯ ಸ್ಪರ್ಧೆಗಳನ್ನು ಒಡ್ಡಿ ಕಾಲಮಿತಿಯನ್ನು ಕೂಡ ನೀಡಿ, ತಿದ್ದಿಕೊಳ್ಳಲು ತಕ್ಕ ಸಲಹೆ ಸೂಚನೆಗಳನ್ನು ನೀಡುತ್ತಾ ಉತ್ತಮ ಬರಹ ಲೇಖನಗಳಿಗೆ ಕತೆ ಕವನಗಳಿಗೆ ಸರ್ಟಿಫಿಕೇಟ್ ನೀಡುವ ಮೂಲಕ ಪ್ರೋತ್ಸಾಹಿಸುತ್ತಾರೆ. ಓದುಗರು ಬದಲಾಗಿಲ್ಲ ಅವರ ಓದುವ ಶೈಲಿ ಬದಲಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಇದೀಗ ನನ್ನ ನಂತರ ನನ್ನ ಮಗಳು ಕೂಡ ಅಂತರ್ಜಾಲದಲ್ಲಿ ಪರಿಚಯವಾದ ಪುಸ್ತಕಗಳನ್ನು ಆನ್ಲೈನ್ ನಲ್ಲಿ ತರಿಸಿ ಓದುವ ಮೂಲಕ ನನ್ನ ಪರಂಪರೆಯನ್ನು ಮುಂದುವರಿಸುತ್ತಿದ್ದಾಳೆ. ಒಟ್ಟಿನಲ್ಲಿ ಪುಸ್ತಕ ಎಂಬ ಆತ್ಮಸಖಿ ನಮ್ಮನ್ನು ಎಡಬಿಡದಂತೆ ಕಾಯುತ್ತದೆ. ನಮ್ಮ ನೋವಿಗೆ ತನ್ನ ತಿಳುವಳಿಕೆಯ ಮುಲಾಮು ಸವರುತ್ತದೆ. ತಲ್ಲಣಗೊಂಡ ಮನಸ್ಸಿಗೆ ಸಮಾಧಾನ ಶಾಂತಿ ನೀಡುತ್ತದೆ. ನವರಸಗಳನ್ನು ಪರಿಚಯಿಸುತ್ತದೆ. ಎಲ್ಲರೂ ಪುಸ್ತಕಗಳನ್ನು ಓದಿ ನಿಮ್ಮ ಮಸ್ತಕದ ಜ್ಞಾನವನ್ನು ಹೆಚ್ಚಿಸಿಕೊಳ್ಳಿ.



**ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ**

Organic Coconut & Banana, Moringa oleifera Available in best Price

98458 65204 ಮೃತ್ಯುಂಜಯನಗರ, ಹೊಸಪೇಟೆ

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**26–04–2024 – ಶುಕ್ರವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ವರಿಯಾಣ |
| ಕರಣ | : ಗರಜ |
| ಸೂರ್ಯೋದಯ | : 05:58:22 |
| ಸೂರ್ಯಾಸ್ತ | : 18:51:14 |
| ರಾಹು | : 10:48–12:25 |
| ಯಮಘಂಡ | : 15:38–17:15 |
| ಗುಳಿಕ | : 07:35–09:12 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 25–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.44 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 67 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.761 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.29 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 252 ಕ್ಯುಸೆಕ್ |
| ಸಾಮರ್ಥ್ಯ | 2.927 ಟಿಎಂಸಿ |

# ವಿಜಯನಗರದಲ್ಲಿ ಮಲೇರಿಯ ಶೂನ್ಯ

## ಡಿಎಚ್‌ಒ ಡಾ.ಶಂಕರ ನಾಯ್ಕ ಹೇಳಿಕೆ। 3 ವರ್ಷದಿಂದ ಜಿಲ್ಲೆ ಮಲೇರಿಯಾ ಮುಕ್ತವಾಗಿದೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಹೊಸಪೇಟೆ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ ಕಾರ್ಯಕ್ರಮವು ಏಪ್ರೀಲ್ 25ರಂದು ನಡೆಯಿತು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿ ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ವಿಜಯನಗರ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ ಉದ್ಘಾಟಿಸಿ ಮಾತನಾಡಿದ ಅವರು, 2025ರ ವೇಳೆಗೆ ಮಲೇರಿಯಾ ಮುಕ್ತ ಗುರಿ ಸಾಧಿಸೋಣ. ಈ ವಿಷಯದಲ್ಲಿ ಜನಜಾಗೃತಿ ಮೂಡಿಸುವುದರ ಜೊತೆಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯತತ್ಪರತೆ ಮುಖ್ಯವಾಗಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಆಸ್ಥೆವಹಿಸಿ ಕಾರ್ಯ ನಿರ್ವಹಿಸಬೇಕು. ಸರ್ಕಾರದ ಮಾರ್ಗಸೂಚಿಯನುಸಾರ ಪ್ರತಿಯೊಂದು ಕಾರ್ಯಕ್ರಮಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಶ್ರಮಿಸಿದಲ್ಲಿ 2025ರ ವೇಳೆಗೆ ಮಲೇರಿಯಾ ಮೂಲೋತ್ಪಾಟನೆ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳಿಂದ ವಿಜಯನಗರ ಜಿಲ್ಲೆಯು ಮಲೇರಿಯಾ ಮುಕ್ತವಾಗಿದೆ. ಇನ್ಮುಂದೆ ಸಹ ಶೂನ್ಯ ಮಲೇರಿಯಾ ಗುರಿ ತಲುಪಲು ಈಗಿರುವ ಸ್ಥಿತಿಯನ್ನೇ ಕಾಪಾಡಿಕೊಂಡು ಹೋಗಲು ಅನುಸರಿಸಬೇಕಾದ ಕ್ರಮಗಳು ಮತ್ತು ಕರ್ತವ್ಯಗಳ ಬಗ್ಗೆ ಎಲ್ಲಾ ಆರೋಗ್ಯ ಇಲಾಖೆಯ ಸಿಬ್ಬಂದಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಮಲೇರಿಯಾ ಕುರಿತಾದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಜಿಲ್ಲೆಯ ವಿವಿಧ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಮಲೇರಿಯ ಜ್ವರಕ್ಕೆ ಉಚಿತ ಚಿಕಿತ್ಸೆ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕರು ಯಾವುದೇ ಜ್ವರವಿರಲಿ, ರಕ್ತಲೇಪನ ಪರೀಕ್ಷೆ ಮಾಡಿಸುವ ಮೂಲಕ ರೋಗ ತಡೆಗಟ್ಟಲು ಇಲಾಖೆಯೊಂದಿಗೆ ಕೈಜೋಡಿಸಲು ಹಾಗೂ ಶೂನ್ಯ ಮಲೇರಿಯ ಗುರಿಯನ್ನು ತಲುಪಲು ಸಹಕರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಹೇಳಿದರು.



ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ 'ವಿಶ್ವ ಮಲೇರಿಯಾ ದಿನಾಚರಣೆ' ಅಂಗವಾಗಿ ನಗರದ ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿಗಳ ಕಚೇರಿ ಆವರಣದಿಂದ ಏರ್ಪಡಿಸಿದ್ದ ಟ್ಯಾಬ್ಲೋ ಜಾಥಾಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಮಲೇರಿಯಾ ರೋಗಕ್ಕೆ ಉಚಿತವಾಗಿ ರಕ್ತ ಪರೀಕ್ಷೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬಹುದು ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮಲೇರಿಯಾ ಜ್ವರಕ್ಕೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಗಣನೀಯವಾಗಿ ಮಲೇರಿಯಾ ಪ್ರಕರಣಗಳು ಇಳಿಕೆಯಾಗಿದ್ದು, ಯಾರಿಗಾದರೂ ವಿಪರೀತ ಜ್ವರದೊಂದಿಗೆ ಮಲೇರಿಯಾ ರೋಗದ ಲಕ್ಷಣ ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಮಲೇರಿಯಾ ಜ್ವರಕ್ಕೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಮಾತನಾಡಿ, ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಭಿ ಸೂಕ್ಷ್ಮಾಣು ವಿನಿಂದ ಉಂಟಾಗುತ್ತದೆ ಹಾಗೂ ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುವಂತ ರೋಗವಾಗಿದ್ದು, ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕರಿಕೆ, ಮೈ ಬೆವರುವುದು ಮಲೇರಿಯಾ ರೋಗ ಲಕ್ಷಣಗಳಾಗಿದ್ದು, ಈ ಲಕ್ಷಣಗಳು ಕಂಡು ಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆಗೆ ಒಳಪಟ್ಟು ಸೂಕ್ತ ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಎಂದು ಹೇಳಿದರು.

ಮಲೇರಿಯಾ ಪ್ರಕರಣಗಳು ಕಂಡು ಬಂದಲ್ಲಿ ಮನೆಯ ಸುತ್ತಮುತ್ತಲು ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಅವಕಾಶ ನೀಡಬೇಕು. ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಕೆ ಮಾಡುವುದು, ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು ಮತ್ತು ಇಲಾಖೆಯಿಂದ ನೀಡಲ್ಪಡುವ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದು ಎಂದು ತಿಳಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ಮಲೇರಿಯಾ ರೋಗ ತಡೆಗಟ್ಟಲು ನವೀನ ವಿಧಾನಗಳನ್ನು ಬಳಸಿ ಮಲೇರಿಯಾ ಪ್ರಕರಣಗಳನ್ನು ಶೂನ್ಯಕ್ಕೆ ತರಲು ಮತ್ತು 2025ರ ವೇಳೆಗೆ ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಸಮುದಾಯದ ಸಹಭಾಗಿತ್ವ ಮಹತ್ವದ್ದಾಗಿದೆ ಎಂದರು.

ಇದೇ ವೇಳೆ ಮಲೇರಿಯಾ ಜಾಗೃತಿಯ ಕುರಿತ ಭಿತ್ತಿ ಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಟ್ಯಾಬ್ಲೋ ಜಾಗೃತಿ ಜಾಥವು ನಗರ ಪ್ರದೇಶದ ಎಲ್ಲಾ ಪ್ರಮುಖ ಬೀದಿಗಳಲ್ಲಿ ಹಾಗೂ ವಾರ್ಡ್‌ಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಮಲೇರಿಯಾ ರೋಗದ ಕುರಿತು ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ, ಡಾ.ಹನುಮಂತಪ್ಪ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಜಿಲ್ಲಾ ಕೀಟಶಾಸ್ತ್ರಜ್ಞ ನಂದಾಕಡಿ, ಜಿಲ್ಲಾ ವಿಬಿಡಿಸಿ ಸಮಾಲೋಚಕ ಪ್ರತಾಪ್.ಹೆಚ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶಕುಂತಲಾ ಮ್ಯಾಳಿ, ನಾಗರಾಜ, ರವೀಂದ್ರ ಜಿನಗ, ಮರಿಬಸವನಗೌಡ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಅಂಭುಜ, ನಂದಿನಿ, ಶಕುಂತಲಾ ಸೇರಿದಂತೆ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳು, ವಿಬಿಡಿಸಿ ಸಿಬ್ಬಂದಿ ವರ್ಗದವರು, ತಾಲೂಕು ಆರೋಗ್ಯಾಧಿಕಾರಿಗಳ ಸಿಬ್ಬಂದಿಗಳು, ಮಲೇರಿಯಾ ಲಿಂಕ್ ವಾಲಂಟೀಯರ್ಸ್ ಮತ್ತು ಇತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಿಬ್ಬಂದಿಗಳು ಭಾಗವಹಿಸಿದ್ದರು.

# ನೇಹಾ ಹಿರೇಮಠ್ ಮನೆಗೆ ಸಿಎಂ ಭೇಟಿ: ಆರೋಪಿಗೆ ಕಠಿಣ ಶಿಕ್ಷೆಗೆ ಕ್ರಮ: ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಹುಬ್ಬಳ್ಳಿ**

ನೇಹಾ ಹಿರೇಮಠ್ ಕೊಲೆ ಅತ್ಯಂತ ದುರದೃಷ್ಟಕರ ಘಟನೆ. ತ್ವರಿತ ವಿಚಾರಣೆಗಾಗಿ ಸಿಓಡಿ ಗೆ ಪ್ರಕರಣವನ್ನು ವಹಿಸಲಾಗಿದೆ. ಜೊತೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಿ. ಪ್ರತ್ಯೇಕ ವಿಚಾರಣೆ ಮಾಡಿ ಕೊಲೆ ಆರೋಪಿಗೆ ಆದಷ್ಟು ಕಠಿಣ ಶಿಕ್ಷೆ ಕೊಡಿಸಲು ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಕೊಲೆಯದ ನೇಹಾ ಹಿರೇಮಠ್ ಅವರ ಮನೆಗೆ ಗುರುವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಈ ಪ್ರಕರಣದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಯಾವುದಾದರೂ ಒಂದು ಪ್ರಕರಣವನ್ನು ಬಿಜೆಪಿ ತನ್ನ ಅಧಿಕಾರಾವಧಿಯಲ್ಲಿ ಸಿಬಿಐ ಗೆ ಕೊಟ್ಟಿಲ್ಲ. ನನ್ನ ಅವಧಿಯಲ್ಲಿ ಅನೇಕ ಪ್ರಕರಣಗಳನ್ನು ಸಿಬಿಐಗೆ ವಹಿಸಿದ್ದೇನೆ. ಇದರಲ್ಲಿ ನಾನು ರಾಜಕೀಯ ಮಾಡುವುದಿಲ್ಲ. ರಾಜಕೀಯದ ಬಗ್ಗೆ ಇಲ್ಲಿ ಮಾತನಾಡುವುದು ಸೂಕ್ತವಲ್ಲ. ನೊಂದ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಲು ಬಂದಿದ್ದೇನೆ. ಅವರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದು, ಅವರೊಂದಿಗೆ ನಾವು ಇರುತ್ತೇವೆ ಎಂದರು. ತನಿಖೆ ಮಾಡಿ ಅಪರಾಧ ಪಟ್ಟಿ ಹಾಕಿದ ನಂತರ ವಿಚಾರಣೆ ಮಾಡಲಾಗುತ್ತದೆ. ಕಾಲೇಜ್ ಕ್ಯಾಂಪಸ್ ನಲ್ಲಿ ಭದ್ರತೆ ಬಗ್ಗೆ ಪ್ರತಿಕ್ರಿಯೆ ನೀಡಿ ನೇಹಾ ತಂದೆ ಹೇಳಿದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ನೇಹಾ ತಂದೆ ನಿರಂಜನ್ ಮಾತನಾಡಿ, ನ್ಯಾಯ ದೊರಕಿಸಿಕೊಡಲು ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ. ನಾಲ್ಕನೇ ದಿನಕ್ಕೆ ತುರ್ತಾಗಿ ತನಿಖೆಗೆ ಆದೇಶವನ್ನು ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಫಾಸ್ಟ್ ಟ್ರ್ಯಾಕ್ ವಿಶೇಷ ಕೋರ್ಟ್ ಸ್ಥಾಪಿಸಿ, ಸಿಐಡಿ ತನಿಖೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿಯಾಗಿರುವ ಸುರ್ಜೆವಾಲ ಅವರು ನನ್ನನ್ನು ಭೇಟಿ ಮಾಡಿ ಪ್ರಕರಣದ ಬಗ್ಗೆ ವಿವರ ಪಡೆದಿದ್ದು, 90 ದಿನದೊಳಗೆ ಅಥವಾ ಗರಿಷ್ಠ 120 ದಿನದೊಳಗೆ ನ್ಯಾಯ ಒದಗಿಸುವುದಾಗಿ ಅದರಲ್ಲಿಯೂ ಆರೋಪಿಗೆ ಗಲ್ಲು ಶಿಕ್ಷೆ ಕೊಡಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದ್ದಾರೆ ಎಂದರು.

# ಡಿಜಿಟಲ್ ಭಾರತ ನಿರ್ಮಾಣ

## ಸಣ್ಣಪುಟ್ಟ ವ್ಯವಹಾರಕ್ಕೂ ಬ್ಯಾಂಕಿಗೆ ಹೋಗುವ ಅಲೆದಾಟ ಮೋದಿಜಿ ತಪ್ಪಿಸಿದ್ದಾರೆ

## ಕೊಪ್ಪಳ ಲೋಕಸಭಾ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕೆ.ಶರಣಪ್ಪ ಹೇಳಿಕೆ

■ **ಹಂಪಿ ಟೈಮ್ಸ್ ಕುಷ್ಟಗಿ**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಡಿಜಿಟಲ್ ಭಾರತ ನಿರ್ಮಾಣ ಮಾಡಿದ್ದಾರೆ ಎಂದು ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕೆ.ಶರಣಪ್ಪ ಹೇಳಿದರು.



ವಿಧಾನಸಭಾ ವ್ಯಾಪ್ತಿಯ ತಳವಗೇರಾದಲ್ಲಿ ನಡೆದ ಚುನಾವಣಾ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಭಾರತವನ್ನು ಡಿಜಿಟಲೀಕರಣ ಮಾಡುವುದು ಅಸಾಧ್ಯ ಎಂದು ಹಿಂದಿನ ಯುಪಿಎ ಸರ್ಕಾರದ ವಿತ್ತ ಸಚಿವ ಚಿದಂಬರಂರವರು ಮಾತನಾಡಿದ್ದರು ಆದರೆ ಇಂದು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರದಲ್ಲಿ ಇದು ಸಾಧ್ಯವಾಗಿದೆ. ಪ್ರತಿಯೊಬ್ಬ ಭಾರತೀಯನೂ ಇಂದು ಡಿಜಿಟಲೀಕರಣಕ್ಕೆ ಹೊಂದಿಕೊಂಡು ಬದಲಾವಣೆ ಬಯಸುತ್ತಿದ್ದಾನೆ. ಸಣ್ಣಪುಟ್ಟ ವ್ಯಾಪಾರಸ್ಥರು ಸಹಿತ ಯುಪಿಐ ಕ್ಯೂಆರ್ ಕೋಡ್ ಹೊಂದಿದ್ದಾರೆ. ಮೊಬೈಲ್ ಮೂಲಕವೇ ಪ್ರತಿ ವ್ಯವಹಾರವನ್ನು ಸರಳಗೊಳಿಸುವ ಮೂಲಕ ಸಣ್ಣಪುಟ್ಟ ವ್ಯವಹಾರಕ್ಕೂ ಬ್ಯಾಂಕಿಗೆ ಹೋಗುವ ಅಲೆದಾಟವನ್ನು ಮೋದಿಜಿ ಸರ್ಕಾರ ತಪ್ಪಿಸಿದೆ ಎಂದು ಕೇಂದ್ರ ಸರ್ಕಾರದ ಸಾಧನೆ ತಿಳಿಸಿದರು.

ಈ ಸಂದರ್ಭದಲ್ಲಿ ಕುಷ್ಟಗಿ ಬಿಜೆಪಿ ಮಂಡಲದ ಅಧ್ಯಕ್ಷ ಮಹಾಂತೇಶ ಬದಾಮಿ, ಕೊಪ್ಪಳ ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣನವರ, ಶಾಸಕರು, ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹೆಚ್ ಪಾಟೀಲ, ಶಾಸಕ ಗಾಲಿ ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಕೊಪ್ಪಳ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರತ್ನಕುಮಾರಿ, ಪ್ರಮುಖರಾದ ಪ್ರಭಾಕರ ಚಿಣಿ, ದೇವೆಂದ್ರಪ್ಪ ಬಳೂಟಗಿ, ಪರಸಪ್ಪ ಕತ್ತಿ, ಫಕೀರಪ್ಪ ವಕೀಲರು, ನಾಗಪ್ಪ ಸೂಡಿ ವಕೀಲರು, ಜಗ್ಗನಗೌಡ, ನಾಗರಾಜ ಮೂಲಿಮನಿ, ಬಾಲಪ್ಪ ಚಾಕ್ರಿ, ಶಂಕರ ಕರಪುಡಿ, ಕಾಶಿಮಪ್ಪ ಬಿಜಕಲ್, ಮಹಿಳಾ ಮೋರ್ಚಾದ ಶೈಲಜಾ ಬಗಲಿ, ಪರಿಮಳ ಶೆಟ್ಟರ, ಗಣೇಶ ಹೊರತಟ್ನಾಳ, ಯಮನೂರ ಚೌಡ್ಕಿ ಸೇರಿದಂತೆ ಉಭಯ ಪಕ್ಷದ ಪ್ರಮುಖರು, ಪದಾಧಿಕಾರಿಗಳು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

## ವಿಜ್ಞಾನ

# ರಾತ್ರಿಯಲ್ಲಿ ಎಲೆಗಳು ಏಕೆ ಕಪ್ಪಾಗಿ ಕಾಣುತ್ತವೆ?

■ **ಆರ್.ಬಿ.ಗುರುಬಸವರಾಜ**

ಪಲ್ಲವಿ ರಾತ್ರಿ ವೇಳೆ ಬಸ್ ಇಳಿದು ತಾತನ ಜೊತೆ ಮನೆಗೆ ಹೊರಟಿದ್ದಳು. ಮನೆಯ ದಾರಿಯುದ್ದಕ್ಕೂ ಬೆಳೆದ ಗಿಡಮರಗಳನ್ನು ನೋಡಿದೊಡನೆ ಬಹುದಿನಗಳ ಪ್ರಶ್ನೆಯೊಂದು ನೆನಪಾಯಿತು. "ತಾತ ರಾತ್ರಿ ವೇಳೆಯಲ್ಲಿ ಹಸಿರು ಎಲೆಗಳು ಏಕೆ ಕಪ್ಪಾಗಿ ಕಾಣುತ್ತವೆ?" ಎಂದಳು. 'ನಿನ್ನ ಪ್ರಶ್ನೆ ಸರಿಯಾಗಿದೆ. ಮನೆ ತಲುಪಿದ ನಂತರ ಹೇಳುವೆ. ನಿನ್ನ ತಮ್ಮ ಅಮೋಘನಿಗೂ ತಿಳಿದುಕೊಳ್ಳುತ್ತಾನೆ' ಎಂದು ಮನೆ ತಲುಪಿದ ನಂತರ ವಿವರವಾಗಿ ತಿಳಿಸಿದರು.



ವಸ್ತುವಿನ ಬಣ್ಣವನ್ನು ಅದು ಪ್ರತಿಫಲಿಸುವ ಅಥವಾ ಹೀರಿಕೊಳ್ಳುವ ಬೆಳಕಿನ ತರಂಗಾಂತರಗಳಿಂದ ನಿರ್ಧರಿಸಲಾಗುತ್ತದೆ. ವಸ್ತುವಿನ ಬೆಳಕು ಬಿದ್ದಾಗ ಕೆಲವು ವಸ್ತುಗಳು ಬೆಳಕನ್ನು ಹೀರಿಕೊಳ್ಳುತ್ತವೆ, ಕೆಲವು ಪ್ರತಿಫಲಿಸುತ್ತವೆ. ನಾವು ನೋಡುವ ಬಣ್ಣವು ನಮ್ಮ ಕಣ್ಣುಗಳಿಗೆ ಪ್ರತಿಫಲಿಸುವ ಬೆಳಕಿನ ತರಂಗಾಂತರಗಳ ಪರಿಣಾಮವಾಗಿದೆ.

ಹಗಲಿನಲ್ಲಿ ಎಲೆಗಳು ಹಸಿರು ಬಣ್ಣದಲ್ಲಿ ಕಾಣುತ್ತವೆ. ಏಕೆಂದರೆ ಎಲೆಗಳಲ್ಲಿ 'ಕ್ಲೋರೊಫಿಲ್' ಎಂಬ ವರ್ಣದ್ರವ್ಯ ಇದೆ. ಇದು ಸೂರ್ಯನ ಬೆಳಕಿನ ಎಲ್ಲಾ ಬಣ್ಣಗಳನ್ನು ಹೀರಿಕೊಂಡು ಹಸಿರು ಬಣ್ಣವನ್ನು ಮಾತ್ರ ಪ್ರತಿಫಲಿಸುತ್ತದೆ. ರಾತ್ರಿ ವೇಳೆ ಪ್ರತಿಫಲಿಸಲು ಸೂರ್ಯನ ಬೆಳಕು ಇಲ್ಲದಿರುವುದರಿಂದ ಎಲೆಗಳು ಕಪ್ಪಾಗಿ ಕಾಣುತ್ತವೆ. ಆದರೆ ಸೂರ್ಯನ ಬೆಳಕಿನ ಅನುಪಸ್ಥಿತಿಯಲ್ಲಿ ಕ್ಲೋರೊಫಿಲ್ ದ್ಯುತಿಸಂಶ್ಲೇಷಣೆಯನ್ನು ನಿರ್ವಹಿಸಲು ಸಾಧ್ಯವಿಲ್ಲ ರಾತ್ರಿಯಲ್ಲಿ ಎಲೆಗಳಲ್ಲಿರುವ ವರ್ಣದ್ರವ್ಯಗಳಾದ ಕ್ಲೋರೊಫಿಲ್ ಮತ್ತು ಕ್ಯಾರೊಟಿನಾಯ್ಡ್‌ಗಳು ತಮ್ಮನ್ನು ತಲುಪುವ ಕೃತಕ ಬೆಳಕಿನ ಎಲ್ಲಾ ತರಂಗಾಂತರಗಳನ್ನು ಹೀರಿಕೊಳ್ಳುತ್ತವೆ ಮತ್ತು ಎಲೆಗಳಿಗೆ ಗಾಢವಾದ ನೋಟವನ್ನು ನೀಡುತ್ತವೆ.

ಈ ವಿದ್ಯಮಾನವನ್ನು ಹಸಿರು ಬಣ್ಣ ಹೊಂದಿದ ಇತರ ವಸ್ತುಗಳಲ್ಲಿಯೂ ಕಾಣಬಹುದು. ಉದಾಹರಣೆಗೆ ಹಸಿರು ಶರ್ಟ್ ಅಥವಾ ಹಸಿರು ಕಾಗದದ ತುಂಡು ಸಹ ರಾತ್ರಿ ವೇಳೆ ಕಡು ಕಪ್ಪುಬಣ್ಣದಲ್ಲಿ ಕಾಣುತ್ತವೆ. ಒಟ್ಟಾರೆಯಾಗಿ ವಸ್ತುವಿನ ಬಣ್ಣವು ಅದು ಸಂವಹನ ನಡೆಸುವ ಬೆಳಕಿನ ತರಂಗಾಂತರಗಳನ್ನು ಅವಲಂಬಿಸಿರುತ್ತದೆ ಮತ್ತು ವಸ್ತುವನ್ನು ರೂಪಿಸುವ ವಸ್ತುಗಳ ಗುಣಲಕ್ಷಣಗಳು, ಅವುಗಳ ವರ್ಣದ್ರವ್ಯಗಳು ಮತ್ತು ಪ್ರತಿಫಲಿತ ಗುಣಲಕ್ಷಣಗಳನ್ನು ಅವಲಂಬಿಸಿರುತ್ತದೆ.

# ಬಳ್ಳಾರಿಯಲ್ಲಿ ಏ.26 ರಂದು ಭಾರಿ ಸರಕು ವಾಹನಗಳ ಸಂಚಾರ ನಿರ್ಬಂಧ: ಡಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಡಾ.ರಾಜ್‌ಕುಮಾರ್ ರಸ್ತೆಯ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಏ.26 ರಂದು ಪಕ್ಷದ ಸಮಾವೇಶ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರ ಸುರಕ್ಷತೆ, ಅತೀ ಗಣ್ಯ ವ್ಯಕ್ತಿಗಳ ಭದ್ರತೆ ಹಾಗೂ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಹಿತದೃಷ್ಟಿಯಿಂದ ಮೋಟರ್ ವಾಹನ ಕಾಯ್ದೆ 1988 ಕಲಂ 115 ರಡಿಯಲ್ಲಿ ಹಾಗೂ ಕರ್ನಾಟಕ ಮೋಟರ್ ವಾಹನ ನಿಯಮ 1989 ನಿಯಮ 221ಎ(5) ರನ್ವಯ ಪ್ರದತ್ತವಾದ ಅಧಿಕಾರಿ ಚಲಾಯಿಸಿ ಏ.26 ರಂದು ಮಧ್ಯಾಹ್ನ 03 ಗಂಟೆಯಿಂದ ರಾತ್ರಿ 09 ಗಂಟೆಯವರೆಗೆ ಬಳ್ಳಾರಿ ನಗರದಲ್ಲಿ ಹೊಸಪೇಟೆಯಿಂದ ಸಿರುಗುಪ್ಪ ಕಡೆಗೆ ಹೋಗುವ ಹಾಗೂ ಸಿರುಗುಪ್ಪದಿಂದ ಹೊಸಪೇಟೆ ಮತ್ತು ಬೆಂಗಳೂರು ರಸ್ತೆ ಕಡೆಗೆ ಚಲಿಸುವ ಭಾರೀ ಸರಕು ಸಾಗಣಿಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA